Mr. SPEAKER.—Order, order.

Sri S. SIVAPPA.—Should not the House know? I request the Hon'ble Speaker to let us know when we can elicit information on the statement made by the Hon'ble Food Minister. Please indicate the time so that I may be prepared to be present in the House. I am entitled to know that and it is the privilege of the House to know it. The Hon'ble Speaker has made clear that he will give time for that.

Mr. SPEAKER.—The hon'ble member is defeating the very object for which he is speaking. If he wants clarification, then by trying to deal with the matter like this, it is not at all helped. The hon'ble member says that he wants to know when it is going to be taken up so that he may arrange other work or whatever it is and be present here. I expect all members to be present at all times. Such of the members who have other work during the period when the House is in session, they do so at their own convenience. My idea is to give time for clarification soon after the Bill is over. I have made that clear. Now Sri C. J. Mukkannappa will speak on the Bill.

MYSORE LAND REVENUE (TEMPORARY SURCHARGE) BILL, 1966.

Motion to Consider (Contd.)

†ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ನಿನ್ನೆಯಿಂದ ಪ್ರಾರಂಭವಾದಂತಹ ಭೂಕಂದಾಯದ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕತಕ್ಕಂಥ ವಿಧೇಯಕ ಏನಿದೆ ಇದು ಸರ್ಕಾರಕ್ಕೆ ಅಪ್ಯಾಯಮಾನವಾಗಿಲ್ಲ. ಇದು ಸರ್ಕಾರ ಆಡಳಿತವನ್ನು ಮಾಡುವ ಪಕ್ಷಕ್ಕೆ ಅಪ್ಯಾಯಮಾನವಾಗಿಲ್ಲ. ಇದನ್ನು ಜನಾಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕೋಸ್ಕರ ಕಳುಹಿಸಬೇಕು. ಇದರ ಬಗ್ಗೆ ಜನಾಭಿಪ್ರಾಯವನ್ನು ತಿಳಿದುಕೊಂಡ ಮೇಲೆ ಎಷ್ಟರಮಟ್ಟಿಗೆ ಜನತೆಯ ಮೇಲೆ ಈ ತೆರಿಗೆಯನ್ನು ಕಾರ್ಭಾರವನ್ನು ಹೊರಿಸಬೇಕು ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಸರ್ಕಾರ ತಯಾರು ಇಲ್ಲ ಎಂದು ಹೇಳುವುದಾದರೆ ಈ ಸಭೆಯಲ್ಲಿ ನಾವು ಏನು ಮಾಡಬೇಕು ಎಂಬುದು ತಿಳಿಯುದೇ ಹೋಗಿದೆ. ನೆನ್ನೆ ಮಾನ್ಯ ಹಣಕಾಸಿನ ಸಚಿವರು ಇದು ಚರಿತ್ರೆಯಲ್ಲಿಯೇ ಮೊದಲನೇ ಬಾರಿಗೆ ಇಂಥಾ ವಿಷಯದ ಮೇಲೆ ಜನಾಭಿಪ್ರಾಯವನ್ನು ಶೇಖರಣೆಮಾಡುವುದಕ್ಕೆ ಹೊರಟಂತಾಗುತ್ತದೆ ಎಂದು ಹೇಳಿದರು. ಹಣಕಾಸಿನ ಸಚಿವರು ಇನ್ನೂ ಯುವಕರು, ಮತ್ತು ಪ್ರೋಗ್ರೆಸೀವ್ ಆಗಿದ್ದಾರೆ. ಇಂಥಾ ವಿಷಯದ ಮೇಲೆ ಜನಾಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕೂ ಇವರಿಗೆ ಏನು ತೊಂದರೆ. ಇದೆ? ಯಾವ ರೂರ್ಸ್ ಪ್ರೋಸೀಜರ್ ಅಡ್ಡ ಬರುತ್ತದೆ? ಇದರ ಬಗ್ಗೆ ಜನಾಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕೆ ಕಳುಹಿಸಿಕೊಡಿ. ಇವೊತ್ತಿನ ದಿವಸ ಆಡಳಿತಪಕ್ಷದಲ್ಲಿರತಕ್ಕ ಅನೇಕ ಜನ ನನ್ನ ಸ್ನೇಹಿತರು ಇದರ ಬಗ್ಗೆ ಜನಾಭಿಪ್ರಾಯವನ್ನು ತಿಳಿದುಕೊಳ್ಳಬೇಕೆಂದು ಹೇಳಿದರೆ ನಮ್ಮ ಸ್ಥಿತಿಗತಿಗಳು ಏನಾಗುತ್ತವೆಯೋ ಎಂದು ಚಾಮುಮುಚ್ಚಿಕೊಂಡು ನುಮ್ಮನೆ ಕುಳಿತುಕೊಂಡಿದ್ದಾರೆ. ಇದರಿಂದ ಜನತೆಯ ಮನಸ್ಸಿನಲ್ಲಿ ಏನು ಪರಿಣಾಮವಾಗುತ್ತದೆ ಎಂಬುದನ್ನು ಆಡಳಿತವನ್ನು ವಹಿಸತಕ್ಕ ಪಕ್ಷದವರು ಯೋಚನೆ ಮಾಡಿಲ್ಲ. ತಮ್ಮ ಒಂದು ಪ್ರತಿಷ್ಠೆಗೋಸ್ಕರ ಜನತೆಯಮೇಲೆ ಭೂಕಂದಾಯದ ಮೂಲಕ ಸರ್‌ಚಾರ್ಜ್‌ನ್ನು ಹಾಕುತ್ತಿದ್ದಾರೆ. ಈ ವಿಧೇಯಕದಲ್ಲಿ ಅಡಕವಾಗಿರತಕ್ಕದ್ದು ಏನು ಎನ್ನುವ ಬಗ್ಗೆ ಜನಾಭಿಪ್ರಾಯವನ್ನು ತಿಳಿದುಕೊಂಡು ಇದನ್ನು ಮಾಡುವುದಕ್ಕೆ ಆಡಳಿತಪಕ್ಷದವರಿಗೆ ಧೈರ್ಯವಿಲ್ಲ. ಶ್ರೀಮಾನ್ ನಿಜಲಿಂಗಪ್ಪನವರು ಪ್ಲಾನಿಂಗ್ ಕಮಿಷನ್ನಿನವರ ಹತ್ತಿರ ಹೋಗಿ ಲ್ಯಾಂಡ್ ರೆವಿನ್ಯೂ ಸರ್‌ಚಾರ್ಜ್ ಹಾಕಿ ನಾಲ್ಕನೇ ಪಂಚವಾರ್ಷಿಕ ಯೋಜನೆಗೆ ಅಗತ್ಯವಾದ ಹಣವನ್ನು ಶೇಖರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಅವರಿಗೆ ಮಾತುಕೊಟ್ಟು ಬಂದಿದ್ದಾರೆ. ಈ ರೀತಿ ಅವರು ಪ್ಲಾನಿಂಗ್ ಕಮಿಷನ್ನಿನವರಿಗೆ ಮಾತು ಕೊಟ್ಟು ಬಂದಿರುವುದರಿಂದ ಇವೊತ್ತಿನ ದಿವಸ ನಿರ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಯಾಗಿ ಮಳೆ ಬೆಳೆಗಳಾಗದೆ ಹೊಚ್ಚಿಗೆ ಅನ್ನವಿಲ್ಲದೆ ಸಾಯುತ್ತಾ ಇರತಕ್ಕಂಥ ರೈತರ ಮೇಲೆ ಈ ಸರ್‌ಚಾರ್ಜ್‌ನ್ನು ಹಾಕಿ ಅದರಿಂದ ಬರತಕ್ಕಂಥ ಹಣವನ್ನು ದೇಶದ ಕಲ್ಯಾಣಕ್ಕೋಸ್ಕರ, ದೇಶದ ಅಭಿವೃದ್ಧಿಗೋಸ್ಕರ ಖರ್ಚು ಮಾಡುತ್ತೇವೆ ಎಂದು ಹೇಳತಕ್ಕಂಥ ಮಾತು ಏನಿದೆ ಇದು ನಿಜ ವಾಗಿಯು ಗಾಯದ ಮೇಲೆ ಒಂದು ಬರೆಯನ್ನು ಎಳೆದ ಹಾಗೆ ಆಗುತ್ತದೆ ಎಂದು ನಾನು ಸರ್ಕಾರಕ್ಕೆ ತಿಳಿಸಬೇಕಾಗಿದೆ. ಇವೊತ್ತಿನ ದಿವಸ 100ಕ್ಕೆ 100ರಷ್ಟು ಸರ್‌ಚಾರ್ಜ್ ಹಾಕಿ ಇದರಿಂದ ಬಂದಂತಹ ಹಣವನ್ನು ದೇಶದ ಅಭಿವೃದ್ಧಿಗೆ ಖರ್ಚುಮಾಡುತ್ತೇವೆಂದು ಹೇಳಿದರೆ ಅದರಿಂದ ನಿಜ ವಾಗಿಯು ಯಾವ ರೀತಿಯಿಂದಲೂ ಈ ರಾಜ್ಯದ ಅಭಿವೃದ್ಧಿ ಆಗುವುದಿಲ್ಲ ಎಂದು ನಾನು ಹೇಳುತ್ತೇನೆ. ಈಗಾಗಲೇ ಈ ಸಭೆಯಲ್ಲಿ ಪಾಸು ಮಾಡಿರತಕ್ಕ ರ್ಯಾಂಡ್ ರೆವಿನ್ಯೂ ಕೋಡ್ ಏನಿದೆ ಅದನ್ನು ಅವಲಂಬನೆ ಮಾಡಿ 100ಕ್ಕೆ 100ರಷ್ಟು ಸರ್‌ಛಾರ್ಜನ್ನು ಹಾಕಿದ್ದೀರಾ, ಅಥವಾ ಆ ಕಾನೂನನ್ನು ಮಾಡುವುದಕ್ಕೆ ಮುಂಚೆ ಇದ್ದಂತಹ ಕಂದಾಯದ ಮೇಲೆ ಸರ್‌ಚಾರ್ಜ್ ಹಾಕುತ್ತಿದ್ದೀರಾ, ಎಂಬು ದನ್ನು ಈ ಸಭೆಗೆ ತಿಳಿಸಬೇಕು. ಹೆಚ್ಚು ಕಂದಾಯವನ್ನು ಹಾಕಿ ಹಣವನ್ನು ವಸೂಲು ಮಾಡಿ ಬೊಕ್ಕಸದಲ್ಲಿರತಕ್ಕ ಹಣವನ್ನು ಮನಸ್ಸಿಗೆ ಬಂದ ಹಾಗೆ ಖರ್ಚು ಮಾಡಬೇಕೆಂದು ಇದ್ದೀರಾ ? ತೆಂಗಿನ ಕಾಯಿ, ಹೊಗಸೊಪ್ಪು, ಸಿಗರೇಟು, ಬೀಡಿ ಮುಂತಾದುವುಗಳ ಮೇಲೆ ಸುಂಕವನ್ನು ಹಾಕಿದರೆ, ಇನ್ನೊಂದರ ಮೇಲೆ ಸುಂಕವನ್ನು ಹಾಕಿದರೆ ಅದಕ್ಕೆ ಸಂಬಂಧಪಟ್ಟ ವಿಧೇಯಕವನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಅದರ ಬಗ್ಗೆ ಜನಾಭಿಪ್ರಾಯವನ್ನು ಕೇಳುತ್ತೀರಿ, ಅದರಂತೆ ಇದನ್ನು ಏತಕ್ಕೆ ಸೆಲೆಕ್ಟ್ ಕಮಿಟಿಗೆ ಕಳುಹಿಸಬಾರದು ? ರೈತರಿಗೆ ಯಾರಿಗೆ ಕಂದಾಯ ಜಾಸ್ತಿಯಾಗುತ್ತದೆ ಎಂಬುದನ್ನು ಅವರು ಈ ಸಭೆಯ ಮುಂದೆ ಬಂದು ಹೇಳುವುದಕ್ಕೆ ಸಾಧ್ಯವಾಗುತ್ತದೆಯೇ ? ಅದ ಕ್ಕೋಸ್ಕರವಾಗಿ ಈ ವಿಧೇಯಕವನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡದೆ ಇರುವ ಕಾರಣದಿಂದ ಇದನ್ನು ಸಾರ್ವಜನಿಕರ ಅಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕೆ ಕಳುಹಿಸಿಕೊಡಬೇಕು ಎಂದು ನಾನು ಹೇಳುತ್ತೇನೆ. ಮೊನ್ನೆ ಸೆಕೆಂಡರಿ ಎಜುಕೇಷನ್ ಎಗ್ಜಾಮಿನೇಷನ್ ಬೋರ್ಡ್ ವಿಧೇಯಕದ ಸಂಬಂಧದಲ್ಲಿ ಬೋರ್ಡ್‌ಕಾರ್ಪೊರೇಷನ್ ಮಾಡುವುದಕ್ಕೆ ಅನೇಕ ರಾಜಕೀಯ ಕೈವಾಡ ನಡೆದು ಬಹಳ ತೊಂದರೆಯಾಗುತ್ತದೆ ಎಂದು ಹೇಳಿ ಅದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿದರು. ಈಗ ಇಂಥಾ ಒಂದು ಉಪಯುಕ್ತವಾದಂತಹ ಮತ್ತು ರೈತರ ಮೇಲೆ ಭಾರಿ ಅಘಾತವನ್ನುಂಟುಮಾಡತಕ್ಕ ಭೂಕಂದಾಯದ ಮೇಲೆ ಸರ್‌ಛಾರ್ಜನ್ನು ಹಾಕತಕ್ಕಂಥ ವಿಧೇಯಕವನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸದೆ ಮೆಜಾರಿಟಿ ಇದೆ ಎಂದು ಹೇಳಿ ಇದನ್ನು ಪಾಸು ಮಾಡುತ್ತೇವೆ ಇದಕ್ಕೆ ಕೈಎತ್ತಿ ಎಂದು ಹೇಳಿದರೆ ಹೇಗೆ ! ಇಂಥಾ ಒಂದು ಕಠಿಣವಾದ ಪರಿಸ್ಥಿತಿ ಯಲ್ಲಿ ಆಹಾರ ನಟಿವರು 20 ಲಕ್ಷ ಟನ್ ಆಹಾರ ಕಡಿಮೆ ಇದೆ ಎಂದು ಹೇಳುವಾಗ ಸರ್ಕಾರದವರು 3½ಕೋಟಿ ರೂಪಾಯಿ ಕಂದಾಯವನ್ನು ಮಾಫಿ ಮಾಡಿದ್ದಾರೆ. ಈಗ ಮತ್ತೊಮ್ಮೆ ರ್ಯಾಂಡ್ ರೆವಿನ್ಯೂ ಸರ್‌ಛಾರ್ಜ್ ಹಾಕುವುದು ನ್ಯಾಯವೇ ! ಅದಕ್ಕೋಸ್ಕರವಾಗಿ ಜನ ಏನು ಅಭಿಪ್ರಾಯವನ್ನು ಕೊಡು ತ್ತಾರೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕಾಗಿ ಇದನ್ನು ಕಳುಹಿಸಬೇಕು ಎಂದು ನಾನು ಹೇಳು ತ್ತೇನೆ. ಮೊನ್ನೆ ಸೇಲ್ಸ್ ಟ್ಯಾಕ್ಸ್ ಬಿಲ್ಲನ್ನು ಈ ಸಭೆಯಲ್ಲಿ ಪಾಸುಮಾಡಿದರು. ಈ ಸೇಲ್ಸ್ ಟ್ಯಾಕ್ಸಿನಿಂದ ಬರತಕ್ಕ ಹಣವನ್ನು ದೇಶದ ಅಭಿವೃದ್ಧಿಯ ಕಾರ್ಯಗಳಿಗೋಸ್ಕರ ಉಪಯೋಗಿಸು ತ್ತೇವೆಂದು ಹೇಳಿದಾಗ, ಟ್ಯಾಕ್ಸ್‌ನ್ನು ಹಾಕಬೇಡಿ; ಅದನ್ನು ಹಾಕುವುದರಿಂದ ಸಾಮಾನ್ಯ ಜನತೆಗೆ ತೊಂದರೆಯಾಗುತ್ತದೆ ಎಂದು ನಾವು ಹೇಳಿದೆವು. ಆಗ ಸರ್ಕಾರದವರು ಆ ತರಿಗೆ ಬಡವರ ಮೇಲೆ ಮತ್ತು ರೈತರ ಮೇಲೆ ಬೀಳುವುದಿಲ್ಲ ಮಧ್ಯಮ ದರ್ಜೆಯ ಜನಗಳ ಮೇಲೆ ಬೀಳುತ್ತದೆ ಎಂದು ಹೇಳಿ ದಾಗ, ಸರ್ಕಾರಕ್ಕೆ ಹಣಬೇಕು ಎನ್ನುವ ದೃಷ್ಟಿಯಿಂದ ಸೇಲ್ಸ್ ಟ್ಯಾಕ್ಸ್ ಹಾಕುವುದಕ್ಕೆ ಅಪ್ಪೊಂದು ಪ್ರೊಟೆಸ್ಟ್ ಮಾಡಲಿಲ್ಲ. 100ಕ್ಕೆ 80 ಜನ ಭೂಮಿಯನ್ನೇ ನಂಬಿಕೊಂಡಿರತಕ್ಕವರಿಗೆ ದೇವೇಂದ್ರ ಮಳೆಯನ್ನು ಸುರಿಸಬೇಕು. ಭೂಮಿತಾಯಿ ಬೆಳೆಯನ್ನು ಕೊಡಬೇಕು. ಅಂಥವರ ಮೇಲೆ ಇಷ್ಟೊಂದು ದೊಡ್ಡ ಕರಭಾರವನ್ನು ಹೊರಿಸುತ್ತಿದ್ದಾರೆ. ಈ ಅಧಿಕಾರ ಬಲ ಬಹಳ ದಿವಸ ಉಳಿಯುವುದಿಲ್ಲ. ಜನತೆಯ ಕಲ್ಯಾಣಕ್ಕೋಸ್ಕರ, ಕೆರೆ ಕಟ್ಟುವುದಕ್ಕೆ ಬಾವಿ ಶೋಡುವುದಕ್ಕೆ, ಜನತೆಗೆ ಕಷ್ಟ ಬಂದಾಗ ಅವರಿಗೆ ಪರಿಹಾರ ಕೊಡುವುದಕ್ಕೆ ಸರ್ಕಾರಕ್ಕೆ ಹಣಬೇಕು, ಇದನ್ನು ನಾನು ತಿರ ಸ್ಕಾರ ಮಾಡುವುದಿಲ್ಲ. ಆದರೆ ಇವೊತ್ತು ಸರ್ಕಾರಕ್ಕೆ ಹಣಬೇಕು ಎಂದು ದೇಶದಲ್ಲಿ ಮಳೆ ಬೆಳೆ ಇಲ್ಲದೆ ರೈತ ಕಷ್ಟದಲ್ಲಿರುವಾಗ ಅವನ ಮೇಲೆ ಈ ಕರಭಾರವನ್ನು ಹೊರಿಸುವುದು ನ್ಯಾಯವೆ ? ರಷ್ಯಾದಲ್ಲಿ ಹಾಗಿದೆ, ಇಂಗ್ಲೆಂಡಿನಲ್ಲಿ ಹೀಗಿದೆ, ಎಂದು ಹೇಳಿ ನನ್ನ ಸ್ನೇಹಿತರು ಸರ್ಕಾರದ ಆದಾಯ ವನ್ನು ಹೆಚ್ಚು ಮಾಡುವುದಕ್ಕಾಗಿ, ಪರ್ ಕ್ಯಾಪಿಟಾಇನ್‌ಕಂ ಜಾಸ್ತಿ ಮಾಡುವುದಕ್ಕಾಗಿ ಜನತೆಯ ಮೇಲೆ ಹೆಚ್ಚು ತೆರಿಗೆಯನ್ನು ವಿಧಿಸುತ್ತಿದ್ದಾರೆ. ಆ ದೇಶದ ಜನಗಳ ಸ್ಥಿತಿಗತಿಗಳೇ ಬೇರೆ; ನಮ್ಮ

ದೇಶದ ಜನಗಳ ಸ್ಥಿತಿಗತಿಗಳೇ ಬೇರೆ ಇದೆ. ಅವರು ತಮ್ಮ ಒರಿದು ಒಳ್ಳೆಯ ಬುನಾದಿಯ ಮೇಲೆ ಜೀವನವನ್ನು ಕಟ್ಟಿಕೊಂಡಿದ್ದಾರೆ. ಜಾಂಜಿಬಾರ್‌ನಲ್ಲಿರತಕ್ಕ ಹೇನರಕತ್ತೆಯನ್ನು ಇಲ್ಲಿಗೆ ತಂದು ಅದನ್ನು ರೇಸ್ ಕುದುರೆ ಎಂದು ಓಡಾಡಿಸಿದರೆ ಅದು ನರಿಯೇ ಎಂದು ನಾನು ಅಡಳಿತ ಪಕ್ಷದವರನ್ನು ಕೇಳುತ್ತೇನೆ. ಸ್ವಾಮಿ, ಯಾವ ನೀತಿ, ಯಾವ ತತ್ವಕ್ಕೆ ಕಟ್ಟುಬಿದ್ದು ಈ ರೀತಿಯಾಗಿ ಬಡ ಜನತೆಯ ಮೇಲೆ ತೆರಿಗೆಯನ್ನು ಹೋರಿಸಬೇಕೆಂದು ನೂರಕ್ಕೆ ನೂರರಷ್ಟು ತೆರಿಗೆ ಕೊಡಬೇಕೆಂದು, ಇದರ ಮೇಲೆ ಪಾಟರು ರೇಟು, ಬೆಟರ್‌ಮೆಂಟು ಲೆವಿ ಇವನ್ನೆಲ್ಲಾ ಕೊಡಬೇಕೆಂದು ಮಾಡಿದ್ದೀರಿ. ಇದನ್ನೆಲ್ಲಾ ಮಾಡಿ ಮೇಂಟೆನೆನ್ಸ್ ಲೆವಿ ಎಂದು ಬೇರೆ ಹಾಕುತ್ತೀರಿ. ಇಷ್ಟೆಲ್ಲಾ ಚಾರ್ಜುಗಳನ್ನು ಹಾಕಿ ರೈತರು ನರಿಯಾಗಿ ಬಾಳುವುದಕ್ಕೆಓಂದು ಅವಕಾಶ ಮಾಡಿ ಕೊಡದೇ ಅವನನ್ನು ಏತಕ್ಕೆ ಶೋಷಣೆ ಮಾಡುತ್ತೀರಿ ಎಂದು ನಾನು ಕೇಳಬೇಕಾಗಿದೆ.

ಅಧ್ಯಕ್ಷರು.—ತಾವು ಮುಗಿಸಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಅಧ್ಯಕ್ಷರಲ್ಲಿ ಪ್ರಾರ್ಥನೆ ಮಾಡುವುದು ಇದು ಬಹಳ ಮುಖ್ಯ ವಿಷಯ, ಇದನ್ನು ಮಾತನಾಡಲು ಇನ್ನೂ ಸ್ವಲ್ಪ ಹೆಚ್ಚು ಕಾಲಾವಕಾಶ ಕೊಡಬೇಕೆಂದು ಕೇಳುತ್ತೇನೆ. ಅಲ್ಲದೆ ಈಗ್ಗೆ ಎರಡು ದಿವಸಗಳಿಂದಲೂ ಇದು ಎಷ್ಟು ಭೀಕರವಾಗಿದೆ ಎನ್ನುವುದು ತಮಗೂ ಅರ್ಥವಾಗಿದೆ. ಅದಕ್ಕಾಗಿ ತಾವು ದಯವಿಟ್ಟು ನಮಗೆ ಇನ್ನೂ ಸ್ವಲ್ಪ ಹೊತ್ತು ಮಾತನಾಡಲು ಅವಕಾಶ ಕೊಡಿ. ಆಹಾರದ ಚರ್ಚೆ ಬಗ್ಗೆ ಮಾತನಾಡಲು ಈಗ ಅವಕಾಶ ಕೊಡದಿದ್ದರೆ ಮುಂದೆ ಬಜೆಟ್ಟು ಕಾಲದ ಚರ್ಚೆಯಲ್ಲಿ ಅದನ್ನೂ ಚರ್ಚೆ ಮಾಡಬಹುದು. ಆಹಾರ ಸಚಿವರು ಹೇಳಿಕೆ ಕೊಟ್ಟ ಮೇಲೆ ಅದರ ಮೇಲೆ ಯಾವ ಚರ್ಚೆ ಮಾಡುವುದೂ ಉಪಯೋಗವಾಗುವುದಿಲ್ಲ. ಈಗ ಆಹಾರದ ಬಗ್ಗೆ ಕೇಳಿದರೂ ಅದಕ್ಕೆ ಏನೂ ಬೆರೆ ಇಲ್ಲ. ತಾವು ಇಲ್ಲಿ ಯಾವುದಾದರೂ ಖಚಿತವಾದ ಪಾಯಿಂಟು ಮೇಲೆ ಮಾತನಾಡಬೇಕು ಎಂದು ಅಪ್ಪಣೆ ಕೊಡಿಸಿದರಿ. ಇವೊತ್ತಿನ ದಿವಸ ನರಕಾರಕ್ಕೆ ಹಣ ಬೇಕು. ನುಮಾರು ಇಪ್ಪತ್ತು ಕೋಟಿಯಷ್ಟು ಹಣ ಶ್ರೀಮಂತರಿಂದ ನರ್ಕಾರಕ್ಕೆ ಬರಬೇಕಾಗಿದೆ. ಶ್ರೀಮಾನ್ ಜತ್ತಿಯವರು ಹಣಕಾಸಿನ ಸಚಿವರಾಗಿದ್ದಾಗ 1967ನೇ ಮಾರ್ಚ್ ಅಖ್ಯೆರಿನೊಳಗಾಗಿ ಇಪ್ಪತ್ತು ಕೋಟಿಯಷ್ಟು ಹಣವನ್ನು ಒಂದು ಕಾಸೂ ಬಾಕಿ ಇಲ್ಲದಂತೆ ವಸೂಲು ಮಾಡುತ್ತೇವೆಂದು ಹೇಳಿದ್ದರು. ಅವರು ಹಣಕಾಸಿನ ಇಲಾಖೆ ಬಿಟ್ಟು ಹೋದ ಮೇಲೆ ಮುಂದೆ ಇಲ್ಲಿಗೆ ಬಂದ ಮಂತ್ರಿಗಳು ಇದನ್ನು ವಸೂಲು ಮಾಡುವ ಗೋಜಿಗೇ ಹೋಗಲಲ್ಲ. ಹೀಗಾದರೆ ನರಕಾರಕ್ಕೆ ಬರಬೇಕಾದ ಹಣ ಬಂದಂತಾಯಿತೇ ? ಇದು ನರಕಾರ ಜನಕ್ಕೆ ಮಾಡುವ ಅನ್ಯಾಯ ವಲ್ಲವೇ ? ಇದಕ್ಕೋನ್ಸರ ಈ ಬಿಲ್ಲನ್ನು ನರ್‌ಕ್ಯೂಲೇಷನ್‌ಗಾಗಿ ಕಳುಹಿಸಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಈಗ ನರಕಾರ ನೇಮಿಸಿಕೊಂಡಿರುವ ಫೈನಾನ್‌ಷಿಯರ್ ಅಡ್ವೈನರ್‌ರವರು ರೈತನ ಮೇಲೆ ಈ ರೀತಿಯಾಗಿ ತೆರಿಗೆಯನ್ನು ಹಾಕಬೇಕೆಂದು ಸಲಹೆ ಮಾಡಿದರೇನು ? ಅವರಿಗೆ ಬಾಕಿ ಶ್ರೀಮಂತರ ಮೇಲೆ ತೆರಿಗೆ ಹಾಕಬೇಕೆಂದು ತೋರಲಲ್ಲವೇ ? ದೇಶದ ಬೆನ್ನುಮೂಳೆ ಎಂದು ಹೇಳುತ್ತಿರುವ ಶೇಕಡಾ 87ರಷ್ಟು ಇರುವ ರೈತರ ಮೇಲೆ ಈಗ ನರ್‌ಚಾರ್ಜು ಎಂದು ಹಾಕ ಬೇಕೆಂದು ನಿಮ್ಮ ನರಕಾರದಲ್ಲಿ 2000-3000 ದಷ್ಟು ಹೆಚ್ಚು ಸಂಬಳ ತೆಗೆದುಕೊಳ್ಳುವ ಹಣಕಾಸಿನ ನಲಹೆಗಾರರು ತಮಗೆ ಸೂಚನೆಯನ್ನೇನಾದರೂ ಕೊಟ್ಟಿದ್ದಾರೆಯೇ ? ನಮ್ಮ ಈಗಿನ ಹಣಕಾಸಿನ ಸಚಿವರು ಟಿಪ್ ಟಾಪ್ ಆಗಿ ಬಹಳ ನುಂದರವಾಗಿರುವಂತಹವರು ರೈತರ ಮೇಲೆ ನೂರಕ್ಕೆ ನೂರರಷ್ಟು ತೆರಿಗಂದಾಯವನ್ನು ಹಾಕಬೇಕೆಂದು ಇಲ್ಲಿ ಬಿಲ್ಲನ್ನು ತಂದಿದ್ದಾರೆ. ಕುರೂಪಿಯಾಗಿರುವ ನಮ್ಮ ರೈತನಿಗೆ ಒಂದು ಹೊತ್ತು ಅನ್ನಕ್ಕೂ ದಾರಿ ಇಲ್ಲದಿರುವಾಗ ಅಂತಹ ಬಡ ರೈತನ ಮೇಲೆ ಹೆಚ್ಚು ಕರಭಾರವನ್ನು ಹೇರುವಂತೆ ಮಾಡಬಾರದು ಎಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ಸ್ವಾಮೀ, ಇದನ್ನು ಏತಕ್ಕಾಗಿ ಇಲ್ಲಿ ಹೇಳುತ್ತೇನೆಂದರೆ, ಇವೊತ್ತಿನ ದಿವಸ ನುಮಾರು 20-25 ಲಕ್ಷ ರೂಪಾಯಿಗಳಷ್ಟು ಹಣದ ಬಾಕಿ ಇರುವ ಎಕ್ಸೈಜು ಕಂಟ್ರಾಕ್ಟರುಗಳಿಂದ ವಸೂಲಿ ಮಾಡುವು ದಕ್ಕೆ ಈ ನರಕಾರಕ್ಕೆ ಆಗಲಲ್ಲ, ಇದರ ಬಗ್ಗೆ ಈಗ ಎರಡು ತಿಂಗಳ ಕೆಳಗೆ ಹೈಕೋರ್ಟಿನಲ್ಲಿ ಒಂದು ಜಜ್ಡ್‌ಮೆಂಟು ಕೂಡ ಬಂದಿದೆ. ಇದರಿಂದಾಗಿ ಮೈಸೂರು ನರಕಾರದ ಈ ಹಣವನ್ನು ವಸೂಲಿ ಮಾಡುವುದಕ್ಕೆ ಪ್ರಯತ್ನ ಮಾಡಲಲ್ಲ. ಇಂತಹವರಿಂದ ನರಕಾರಕ್ಕೆ ಬೊಕ್ಕಸಕ್ಕೆ ಬೇಕಾಗಿರುವ ಹಣವನ್ನೇತಕ್ಕೆ ವಸೂಲು ಮಾಡಬಾರದು ಎಂದು ನಾನು ಇಲ್ಲಿ ಕೇಳುತ್ತೇನೆ. ತಾವು ಖರ್ಚು ಮಾಡುವುದಕ್ಕೆ ರಿನರ್ವ್‌ನಲ್ಲಿ ಹಣವಿಲ್ಲದೇ ಇರುವಾಗ ಕೋಟಿಗಟ್ಟಲೆ ಹಣ ಖರ್ಚು ಮಾಡಿ ಕಟ್ಟಿರುವ ಕಟ್ಟಿಗಳಿಂದ ಯಾವ ಪ್ರತಿಫಲವೂ ಇನ್ನೂ ದೊರಕಲಲ್ಲ. ಆದರೆ ಇಲ್ಲಿ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಕೃಷ್ಣಪ್ಪನವರು ಇಂತಿಂತಹ ಯೋಜನೆಗಳಿಗಾಗಿ ನಾವಿರಾರು ಕೋಟಿಯಷ್ಟು ಖರ್ಚು ಮಾಡಿದ್ದೇವೆ ಎಂದು ಹೇಳುತ್ತಾ ಇಲ್ಲಿಂದ ಪರಾರಿಯಾದರು. (ನಗು). ಎಂದರೆ ಅವರು ಈಗ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಇಲ್ಲಿಲ್ಲ, ಬೇರೆ ಹೌಸಿನಲ್ಲಿದ್ದಾರೆ. ಈಗ ಪುನಃ ಇಲ್ಲಿ ರ್ಯಾಂಡು ರೆವೆನ್ಯೂ ನವ್ ಚಾರ್ಜು ಎಂದು ಪುನಃ ಈಗಿನ ಹಣಕಾಸು ಸಚಿವರು ಬಡಜನತೆಯ ಮೇಲೆ ತರಬೇಕೆ ಬೇಡವೇ ಎಂದು ದ್ವಂದ್ವ ಯುದ್ಧ ಮಾಡುತ್ತಿದ್ದಾರೆ. ಹೀಗೆ ಯಾವ ಯೋಜನೆಯನ್ನು ಮಾಡಿದರೂ ಯಾವ ಪ್ರತಿಫಲವೂ ದೊರಕದೇ ಮಾಡಿದರೆ ಅದರಿಂದ ಯಾವ ಜವಾಬುದಾರಿಯನ್ನೂ ಹೊರದೇ ಜಾಯಿಂಟು ರೆಸ್‌ಪಾನ್‌ಸಿಬಿಲಿಟಿ ಇದ್ದರೂ ಹೀಗೆ ಹೇಳುವುದು ನ್ಯಾಯವಲ್ಲ ಎಂದು ತಿಳ್ಸುಲ್ಲಿ ತಿಳಿಸುತ್ತೇನೆ.

ಅಧ್ಯಕ್ಷರು.—ಶ್ರೀ ಆರ್. ಎಸ್. ಹೆಗ್ಗಡೆ.....

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶ್ರೀಮಾನ್ ಹೆಗ್ಗಡೆಯವರು ಏನು ಹೇಳುತ್ತಾರೆ? ಅವರು ಆಗಲೇ ಶೇಕಡಾ ಮೂವತ್ತು ಮೂರೂವರೆಯಷ್ಟು ಹಾಕಬೇಕೆಂದು ಒಪ್ಪಿದ್ದಾರೆ. ಆದುದರಿಂದ ನಾನು ಏತಿವಿನಯದಿಂದ ಪ್ರಾರ್ಥನೆ ಮಾಡುವುದು ನನಗೆ ಮಾತನಾಡಲು ಇನ್ನೂ ಸ್ವಲ್ಪ ಅವಕಾಶ ಕೊಡಿ. ನಿಮಗೆ ಹಣ ಬೇಕು. ಬೇಕಾದರೆ 24 ಜನ ಮಂತ್ರಿಗಳನ್ನು 8ಕ್ಕೆ ಇಳಿಸಿ, ಜಿಲ್ಲಾಧಿಕಾರಿಗಳು 19 ಜನರಿದ್ದಾರೆ, ಅದು ಜಾಸ್ತಿ ಆ ಸಂಖ್ಯೆಯನ್ನಿಳಿಸಿ, 38 ಆಸಿಸ್ಟೆಂಟ್ ಕಮಿಷನರುಗಳನ್ನು ತೆಗೆಯಿರಿ, ಎ. ಜಿ. ರಾಮಚಂದ್ರರಾಯರ ಬುದ್ಧಿವಾದವನ್ನು ಕಾರ್ಯರೂಪಕ್ಕೆ ತನ್ನಿ. ಹಣಕಾಸಿನ ಸಚಿವರು ಆರೂವರೆ ಕೋಟಿ ರೂಪಾಯಿಗಳ ಖರ್ಚನ್ನು ಕಡಮೆಮಾಡುತ್ತೇವೆಂದು ಹೇಳಿದರು. ಅದನ್ನು ಮಾಡಲಿ, ರೈತರ ಮೇಲೆ ತೆರಿಗೆ ಹೇರುವುದು ಬೇಡ. ಅದು ನ್ಯಾಯವಲ್ಲ ಎಂದು ಹೇಳುವುದು ತಪ್ಪೇ! ಹೆಂಡದ ಅಂಗಡಿಗಳಿಗೆ ರೈಸೆನ್ಸ್ ಕೊಟ್ಟು ಉತ್ತೇಜಿಸಿ ಹೆಚ್ಚಿಸುವುದಾಗಿ ಹೇಳಿದ ಹೆಗ್ಗಡೆಯವರು ದೇಶದ ಎಲ್ಲಾ ಕಡೆ ಹೆಂಡದ ಅಂಗಡಿ ತೆಗೆಯಲಿ. ಈ ಅರ್ಧನಾರಿ ಸ್ವರೂಪ ಬೇಡ. ಹಾಗೆಂದರೆ ಅರ್ಧ ಹೆಣ್ಣು ಅರ್ಧ ಗಂಡು ಎಂದು ತಿಳಿಯುವಾರದು, ಆತ ಕೈಲಾಸದಲ್ಲಿರುವ ಮುಕ್ಕಣ್ಣ. ಆತ ಮುಕ್ಕಣ್ಣನಿಂದ ನೋಡುತ್ತಾನೆ, ಕಾಂಗ್ರೆಸ್ಸಿನ ಪರಾಭವವಾಗುತ್ತದೆ. ರೈತರ ಮೇಲೆ ಹೀಗೆ ತೆರಿಗೆ ಹೊರೆ ಹೇರುತ್ತಾ ಹೋದರೆ ನಿಜವಾಗಿಯೂ ಕೂಡ ಕಾಂಗ್ರೆಸ್ಸಿನ ಅವನತಿ ಪ್ರಾರಂಭವಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

2-30 P.M.

Sri R. S. HEGDE (Honnavar).—Mr. Speaker, Sir, while supporting this Mysore Land Revenue Temporary Surcharge Bill, I oppose the amendment of Sri S. M. Krishna for eliciting public opinion, because it is going to be unprecedented in the history of Mysore legislature. It will be in the nature... .....

[MR. DEPUTY SPEAKER in the Chair].

Sri V. S. PATIL.—Sir, on a point of order. Under rule 73 of the Rules of Procedure of our House, there is a specific provision made that either the Mover of the Bill or any other Member may bring an amendment to send that Bill for eliciting public opinion. In spite of this specific rule of this Assembly, the Hon'ble Member who was now addressing the House says that it is unprecedented and uncovered by the procedure. Is that remark tenable in view of the specific provision made in the Rules of Procedure of this House? Such a remark cannot be made by any member of this House. So, whether the remark made by him is in consonance with the Rules of Procedure or not?

Sri K. S. SURYANARAYANA RAO.—I rise to support the point of order. It is a sort of reflection on this House. After so much of deliberation, we framed this procedure. By saying this, it is a bad reflection on the Hon'ble Chair and it almost amounts to contempt of this House also. What is provided in the Rules of Procedure is called as

unprecedented. There seems to be a little doubt about the Rules of Procedure. If so, let us sit and discuss about the rules we want to follow. To say that this is a unprecedented does not bring any credit to this House.

Sri K. LAKKAPPA.—I support the point of order. Sri R. S. Hegde said that it is unprecendented. When members are allowed to send amendments...

Mr. DEPUTY SPEAKER.—Will the hon'ble Member specifically point out to me under what rules he cannot say that?

Sri K. LAKKAPPA.—He has violated the provision of rules 73 and 74 of the Rules of Procedure which gives the right to a member to ask to elicit public opinion. He has said in this House that it is unprecedented. Therefore, he has contravened the existing rules and he has further caused contempt of the House and the Speaker. You may call upon the Member to apologise and his remarks should be expunged and any suitable action be taken against him because it is a clear violation of privilege.

Mr. DEPUTY SPEAKER.—Can he say what he said exactly?

Sri K. LAKKAPPA.—Further I request the Chair to call for an explanation from the Hon'ble Member and ask him to apologise because he has caused a breach of privilege of the Member and the House and the Speaker.

Sri R. S. HEGDE.—Sir, I wish to make a distinction between the precedent and the rule. When once a Bill having been moved, there is no precedent for sending the Bill for eliciting public opinion. Rule is different from convention and precedent. What I submitted was, there is no precedent in the history of this House to send a Bill after it was moved, for eliciting public opinion. It was sent before it was moved; that is what I mean.

Sri ANNA RAO GANAMUKHI.—The Hon'ble speaker may see that there was a motion moved to send the Dramatic Performances Bill to elicit public opinion.

Mr. DEPUTY SPEAKER.—Can he say that it is a breach of any rule to hold a wrong opinion? There is no point of order. It may be a wrong opinion of the member.

Sri K. LAKKAPPA.—Is it the ruling?

Mr. DEPUTY SPEAKER.—Yes.

Sri R. S. HEGDE.—Then, Sir, if this Bill is passed, it is going to come before the electorate and they will not only examine this piece of legislation but every action of the Government since its inception. So, nobody need be under the impression that the electorates are ignorant and they will not examine the actions of the Government. This piece of legislation and also other actions of the Government are bound to be examined by the electorate in the next elections in 1967.

Sri K. H. RANGANATH.—I rise to a point of order. The hon'ble member has questioned the authority of the Speaker in admitting the amendment and he says that it would be a bad precedent to admit the amendment moved by Sri S. M. Krishna. So he has questioned the power of the Speaker in admitting the amendment.

Mr. DEPUTY SPEAKER.—He has already clarified the matter and the matter is over. He cannot raise it again.

Sri K. H. RANGANATH.—No Member is expected to pass any remark against the Speaker. The Speaker has admitted the amendment and it is there on record. The amendment is before the House and the House is seized of it. Now is it open to the member to question the authority of the Speaker in admitting the amendment when the Bill and the amendment are both under discussion ?

Sri P. VENKATAGIRIYAPPA.—The official record may be verified and what he has actually said may be brought to the notice of the House.

Mr. DEPUTY SPEAKER.—I will see. Does Sri Hegde mean to say that the Chair committed a wrong in admitting the amendment ?

Sri R. S. HEGDE.—No.

Sri K. H. RANGANATH.—This is a very serious matter, Sir. Before giving your ruling, I request you, Sir, to verify the proceedings. If he has said that and if it is recorded so, he is to be properly dealt with by this House. Therefore, I request you before giving the ruling to verify the record and satisfy yourself. If he has not said so, he had definitely committed a very serious breach of privilege of this House and he should be properly dealt with.

Mr. DEPUTY SPEAKER.—He has said it already. He is only repeating it.

Sri K. H. RANGANATH.—This is a very serious matter. It is not a party mater. It is a mattter concerning the House. When he questions the very authority of the Speaker in admitting the amendment which is already before the House, it is a very serious matter. The amendment is before the House and the House is seized of it, but now he says it would be unwisdom in admitting this amendment.

Mr. DEPUTY SPEAKER.—The member has clarified his position that it was not his intention to say anything against the Chair.

Sri K. H. RANGANATH.—I am not satisfied with his explanation.

Mr. DEPUTY SPEAKER.—He has clarified that it was not his intention to say anything against the Chair regarding the admission of this amendment. If he still want me to verify I will go through the record and see whether the member has said so, But when the member has clarified, I do not think much remains to be seen.

Sri K. H. RANGANATH.—He has committed a very serious offence. Before allowing him to speak, I request you, Sir, to verify the proceedings.

Mr. DEPUTY SPEAKER.—I have already told the member that I will verify the matter. In the meanwhile the member may proceed.

Sri R. S. HEGDE.—In supporting this piece of legislation, on a dispassionate understanding of the same, I am sure this legislation is bound to get the unanimous approval of the House. This Bill in the original form was for a cent percent surcharge on the revenue assessment for 5 years, but the Minister concerned in consultation with his own colleagues and others has moved an amendment that it be reduced to 33⅓ per cent.

Sri S. GOPALA GOWDA.—If the Hon'ble member will yield.....

Sri R. S. HEGDE.—I do not yield.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಯಾರಾದರೂ ಹೊಲ ಉಳುವ ರೈತರಿದ್ದರೆ ಮಾತನಾಡಲಿ. ಅವರು ಬೇಕಾದರೆ ಟೆನ್ಸ್ ಕೇಸನ್, ತೆಗೆದುಕೊಂಡು ಡಿಫೆಂಡ್ ಮಾಡಬಹುದು.

Mr. DEPUTY SPEAKER.—He is not yielding.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕಾನ್ಸ್‌ಟಿಟ್ಯೂಷನರ್ ಲಾ ಪಾಯಿಂಟ್ ಇದ್ದರೆ ಅದನ್ನು ಕೋರ್ಟ್ ಕಛೇರಿಯಲ್ಲಿ ಮಾತನಾಡಲಿ, ರೈತರ ಮೇಲೆ ಕಂದಾಯ ಹಾಕುವಾಗ ಇದೆಲ್ಲ ಅವರಿಗೆ ಏನು ತಿಳಿಯುತ್ತದೆ ?

Mr. DEPUTY SPEAKER.—He has given his opinion.

Sri R. S. HEGDE.—Now it has been reduced to 33⅓ per cent and that too only for one year. Let us try to understand this piece of legislation from a very dispassionate point of view. Looking from the point of view of investment that the Government are making for development of agriculture, is it not something human to expect some return for the investment made by Government.

Sri. C. J. MUCKANNAPPA.—The Government are spending Rs. 3,000 a month on the Financial Adviser. Let them abolish that post and save it.

Sri R. S. HEGDE.—That is a matter of opinion.

Sri C. J. MUCKANNAPPA.—It is not a matter of opinion.

Mr. DEPUTY SPEAKER.—Sri Muckannappa can say all that during the budget discussion.

Sri V. M. DEO.—Sir, you better assist him.

Mr. DEPUTY SPEAKER.—Order, order.

Sri R. S. HEGDE.—Government have invested crores of rupees for the development of agriculture and the Government want that every agriculturist must grow more. Is it not legitimate for Government to expect some return for the investment made by Government ?

Sri K. LAKKAPPA.—I request the Hon'ble member to yield for a moment.

Sri R. S. HEGDE.—I am not yielding. The slogan of the day is 'Grow More', 'Jai Kisan' and 'Jai Jawan'.

Sri C. J. MUCKANNAPPA.—He is not alive today. This 'Jai Kisan' and 'Jai Jawan' is dead and gone.

Sri R. S. HEGDE.—If the State as a whole has to be developed, then taxation becomes something inevitable.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಟ್ಯಾಕ್ಸೇಷನ್ ಹೋಗಲಿ, 18 ವರ್ಷದಿಂದ ಒಂದು ಗೊಬ್ಬರದ ಕಾರ್ಖಾನೆ ತೆರೆಯುವುದಕ್ಕೆ ಅವರಿಗೆ ಆಗಲಿಲ್ಲ. ಅವರು ಅದಕ್ಕೆ ಏನು ಮಾಡಿದ್ದಾರೆಂದು ಹೇಳಲಿ.

Sri R. S. HEGDE.—Sir, Therefore, taxation is something consistent with the development of the State. At the outset I may tell that as far as the Finance Minister is concerned, in his own constituency the original assessment has been increased by 4 times. Per acre it was Rs. 14 and now it is Rs. 56. If at all anybody is hit as far as surcharge is concerned, I think Finance Minister is number one. When the Survey Settlement Reports came up before this House, most of the members were agreeable for increasing the original assessment twice. The original assessment was Rs. 3 crores and odd and revised assessment is only Rs. 4 crores and odd and the increase is only to the extent of Rs. 1 crore and 30 or 40 lakhs. The revised assessment is based on a scientific basis. It is based on the income which is to be derived under the provisions of the Land Revenue Code by going through the various procedures and 4 per cent is charged on the gross income. When the scientific basis of charging 4 per cent on the gross yield is accepted, then individual hardships should not be considered. It is not possible for this State or any State or any institution to satisfy individual hardships. I am quite conscious of the fact that as far as the betel growers, mulberry growers and coffee planters are concerned, there is a little increase in the assessment ; it may be even three times. Nevertheless, these individual difficulties should not come in the way of paying this surcharge. As I said, the revised assessment is based on a charge of 4 per cent on the gross yield and that is the rule which is applicable throughout the State. When once that principle is accepted, individual hardships should not come in the way of the payment of the surcharge especially when it will not be more than twice the original assessment. Finally it has been said more than once that the Planning Commission has earmarked about Rs. 38 crores for the Mysore State provided the Government finds Rs. 13 crores from its own resources. So even if the agriculturists are going to pay by way of surcharge Rs. 1 crore and 35 lakhs, they will get Rs. 3 crores in return and if they do not give Rs. 1 crore 35 lakhs, Rs. 3 crores will go away. To that extent our agriculturists will be the losers.

Sri ANNARAO GANAMUKHI.—Will it be grant or loan ?

Sri R. S. HEGDE.—It may be grant or loan at cheap rate of interest. (Interruption) Let not my friend think that he has got the monopoly of wisdom ; let him not think that he knows everything and that others know nothing. Government is giving loans at cheap rate of interest. If you go to the banks, the rate of interest is 10 to 12 per cent. To that extent our agriculturists are benefited. For irrigation wells a loan of Rs. 5,000 is given at 5 or 6 per cent. Are we getting loan at 6 per cent from any of the banks ? It may be loan or subsidy but nevertheless the fact remains that our agriculturists will be getting Rs. 4 crores. By opposing this piece of legislation, those persons who are opposing will be depriving our agriculturists of Rs. 4 crores which they will be getting in return for paying surcharge.

[MR. SPEAKER in the Chair,]

† ಶ್ರೀ ಎಸ್. ಶಿವಪ್ಪ.—ನಭಾಪತಿಯವರೇ, ಈ ನಭೆಯಮುಂದೆ ತಂದಿರತಕ್ಕಂತಹ ಭೂಕಂದಾಯದ ಮೇಲೆ ಸರ್ಚಾರ್ಜನ್ನು ವಿಧಿಸತಕ್ಕಂತಹ ವಿಧಾಯಕವನ್ನು ಸಾರ್ವಜನಿಕರ ಅಭಿಪ್ರಾಯಕ್ಕೆ ಕಳುಹಿಸಿ, ಸಾರ್ವಜನಿಕರ ಅಭಿಪ್ರಾಯವನ್ನು ತಿಳಿದು ಈ ಮಸೂದೆಯನ್ನು ಸಭೆಯ ಮುಂದೆ ಮುಂಡನೆ ಮಾಡಬೇಕು ಎಂದು ಹೇಳಿ ಶ್ರೀಮಾನ್ ಎಸ್. ಎಂ. ಕೃಷ್ಣ ಅವರು ಕಳಿಸಿರ ತಕ್ಕಂಥಹ ತಿದ್ದುಪಡಿಯನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಇವತ್ತು ಮೈಸೂರು ದೇಶವು ಹಸಿವಿನ ಅಗ್ನಿ ಜ್ವಾಲೆಯಲ್ಲಿ ಬೇಯುತ್ತಿರತಕ್ಕಂಥಹ ಒಂದು ಸಂಧಿಗ್ಧ ಸಮಯದಲ್ಲಿ ಇಂಥ ಒಂದು ಕ್ರೂರವಾದ ಕರಾಳ ಶಾಸನವನ್ನು ಹಸಿವಿನಿಂದ ಬೆಂದಿರತಕ್ಕ ಜನತೆಯ ಮೇಲೆ ತಂದಂತಹ ಈ ಒಂದು ಹುಚ್ಚು ಸಾಹಸ, ಈ ಒಂದು ಧೈರ್ಯ ಸರಿಯೇ? ತಮ್ಮಲ್ಲಿ ಕರುಣೆ ಸ್ವಲ್ಪವೂ ಇಲ್ಲವೇ ಎಂದು ನಾನಾದರೂ ಕಾಣದವನಾಗಿದ್ದೇನೆ. ಇವತ್ತು ದೇಶದಲ್ಲಿ ಅನ್ನ, ಅನ್ನ, ಎಂದು ಹೇಳಿ ಕೂಗುವುದನ್ನು ನಾವು ಕಿವಿ ಮೊಳಗುವಂತೆ ಎರ್ರಾ ಕಡೆಗಳಲ್ಲೂ ಕೇಳುತ್ತಿದ್ದೇವೆ. ಹಾಗೆ ಅನ್ನವನ್ನು ಕೇಳುತ್ತಿರತಕ್ಕ ಜನರಿಗೆ ಅನ್ನವನ್ನು ಒದಗಿಸುವುದು ಸರ್ಕಾರದ ಪ್ರಥಮ ಕರ್ತವ್ಯ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಸರ್ಕಾರ ಯಾವ ಮಸೂದೆಯನ್ನೇ ತರಲಿ, ಆ ಮಸೂದೆಯ ಪ್ರತಿರೂಪವಾಗಿ, ಅನ್ನದಾತನ ಸಹಾಯಕವಾಗಿ, ರೈತನ ಬೆಂಬಲಕ್ಕೆ ಬರುತ್ತದೆ ಎಂಬ ಆಶಯವನ್ನು ನಾವು ಹೊಂದಿದ್ದೇವೆ. ಇವತ್ತು ಜವಾಬ್ದಾರಿಯನ್ನು ಹೊಂದಿರತಕ್ಕಂತಹ ಸರ್ಕಾರ ರೈತನ ಬೆನ್ನುಮೂಳೆಯನ್ನು ಮುರಿದಿದ್ದಾರೆ. ಅವರ ಮೇಲೆ ಹೊರಲಾರದಷ್ಟು ಹೊರೆಯನ್ನು ಈ ತೆರಿಗೆಯ ರೂಪದಲ್ಲಿ ಹೊರಿಸಿ, ದೇಶದ ಬೆನ್ನು ಮೂಳೆ ಎಂದು ರೈತನನ್ನು ಏನು ಹೇಳುತ್ತಾರೆ, ಅದನ್ನು ಚೂರು ಚೂರು ಮಾಡತಕ್ಕಂತಹ ಈ ಮಸೂದೆಯನ್ನು ಇಲ್ಲಿ ತಂದಿದ್ದಾರೆ. ಇದರಿಂದ ದೇಶದಲ್ಲಿ ಖಂಡಿತವಾಗಿಯೂ ಒಂದು ಕ್ರಾಂತಿಯನ್ನು ಉದ್ಭವಮಾಡುವುದಕ್ಕೆ ನೀವಾಗಿಯೇ ದಾರಿಯನ್ನು ಮಾಡಿಕೊಡುತ್ತಿದ್ದೀರಿ. ಇವತ್ತು ಪ್ರಪಂಚದ ಉದಾಹರಣೆಗಳನ್ನು ತೆಗೆದುಕೊಂಡರೆ, ಯಾವ ದೇಶದಲ್ಲಾಗಲೀ ಕ್ರಾಂತಿಯಾಗಿರತಕ್ಕ ನಿವೇಶಗಳನ್ನು ಪರಿಶೀಲನೆ ಮಾಡುವುದಾದರೆ ಕ್ರಾಂತಿ ಉದ್ಭವವಾಗಿರುವುದು ಅನ್ನಕ್ಕಾಗಿ. ಅನ್ನದ ಹಾಹಾಕಾರ ದೇಶದಲ್ಲಿ ಎದ್ದಾಗ ಜನತೆಗೆ ಯಾವ ಶಾಂತಿಯೂ ಸಿಗಲಾರದು ಎಂಬುದನ್ನು ಪ್ರಪಂಚದ ಅನೇಕ ಉದಾಹರಣೆಗಳು ಎತ್ತಿ ತೋರಿಸುತ್ತವೆ.

3-00 P. M.

ಮೈಸೂರು ದೇಶದಲ್ಲಿ ಇಂತಹ ಇತಿಹಾಸಕ್ಕೆ ನೀವಾಗಿ ನೀವು ಎಡೆ ಕೊಡುತ್ತೀದ್ದೀರಿ. ನಾಳೆಯೋ ನಾಳಿದ್ದೋ ಹಣಕಾಸಿನ ನಚಿವರು ಬಡ್ಜೆಟ್ಟನ್ನು ಮುಂದನೆ ಮಾಡುವವರಾಗಿದ್ದಾರೆ. ಹಣಕಾಸಿನ ಪರಿಸ್ಥಿತಿಯನ್ನು, ತುಲನೆಮಾಡಿ ದೇಶದಲ್ಲಿ ಹಣದ ಅಭಾವ ಎಷ್ಟು ಇದೆ ಎಂದು ಚರ್ಚೆಮಾಡಿ, ಎಷ್ಟು ಹಣಬೇಕು ಯಾವರೀತಿ ತೆರಿಗೆ ಹಾಕಬೇಕು ಎಂದು ಚರ್ಚೆ ಮಾಡತಕ್ಕಂಥಾದ್ದೇ ಹಣಕಾಸಿನ ಮಸೂದೆಯ ತತ್ವ. ಹಣಕಾಸಿನ ನಚಿವರು ಬಡ್ಜೆಟ್ಟನ್ನು ನಾಳೆ ಸಭೆಯ ಮುಂದೆ ಮುಂಡಿಸುವಾಗ ಇವೊತ್ತಿನ ದಿವನ ತೆರಿಗೆ ಮಸೂದೆ ತರತಕ್ಕದ್ದು ಪ್ರಜಾ ಪ್ರಭುತ್ವ ಹೊಂದಿರತಕ್ಕ ಪಾರ್ಲಿಮೆಂಟರಿ ಇತಿಹಾಸವನ್ನು ನೋಡಿದರೆ ಎಲ್ಲೂ ಕೂಡ ಇಲ್ಲ. ಯಾವಾಗಲೂ ಕೂಡ ಬಡ್ಜೆಟ್ ಮುಂಡನೆ ಮಾಡಿದ ಮೇಲೆ ಬಡ್ಜೆಟ್ ಆಧಾರದ ಮೇಲೆ ಈ ತರಹ ಮಸೂದೆ ಬರತಕ್ಕದ್ದು ಸ್ವಾಭಾವಿಕ. ನಮ್ಮ ಹಣಕಾಸಿನ ನೀತಿ ತಿರುಗು ಮುರುಗು ಆಗಿದೆ. ನಮ್ಮ ದೇಶದಲ್ಲಿ ಇಂತಹ ಪರಿಸ್ಥಿತಿಯನ್ನು, ಹಣಕಾಸಿನ ವಿಷಮ ಪರಿಸ್ಥಿತಿಯನ್ನು ಸರ್ಕಾರ ತಂದು ಒಡ್ಡಿದೆ. ದೇಶವು ಹಣಕಾಸಿನ ವಿಷಯದಲ್ಲಿ ದಿವಾಳಿ ಕಡೆಗೆ ಹೋಗುತ್ತಿದೆ. ತೆರಿಗೆ ಮಸೂದೆಯನ್ನು ಸಭೆಯ ಮುಂದೆ ತರುವಾಗ ಒಂದೇ ವಾದ ನಮ್ಮ ಮುಂದಿಡುತ್ತಾರೆ. ಪಂಚವಾರ್ಷಿಕ ಯೋಜನೆಗೋಸ್ಕರ ಹಣಬೇಕು ಆದಕ್ಕೋಸ್ಕರ ಮಸೂದೆಯನ್ನು ತರುತ್ತೇವೆ ಎಂದು ಹೇಳುತ್ತಾರೆ. ಈ ಪಂಚವಾರ್ಷಿಕ ಯೋಜನೆ ಪೆಡಂಭೂತ ಭೂತಾಕಾರವಾಗಿ ದೇಶದಲ್ಲಿ ಆಗಾಗ್ಗೆ ಎಲ್ಲಿ ಯಾವಾಗ ಹಣಬೇಕೋ, ಆಗ ತೆರಿಗೆಯನ್ನು ಎತ್ತಿ ತೋರಿಸುತ್ತದೆ. ಈ ಭೂತ ದೇಶವನ್ನು ಎಂದು ನುಂಗುವುದೋ ಎನ್ನುವ ಭಯ ಆಗಿದೆ. ಸರ್ಕಾರ ಸಭೆಯ ಮುಂದೆ ಇರುವ ವಾದ ಒಂದೇ ವಾದ. ಅದೇನೆಂದರೆ, ಪಂಚವಾರ್ಷಿಕಯೋಜನೆಗೆ ಹಣಬೇಕು, ಈ ಹಣಕ್ಕಾಗಿ ತೆರಿಗೆ ಹಾಕಬೇಕು. ರೈತ ಸಾಯಲಿ, ರೈತ ಹಸಿವೆಯಿಂದ ನರಳಿ ದೇಶದಲ್ಲಿ ಅಗ್ನಿದೇವತೆಯಿಂದ ಧ್ವಂಸವಾಗಲಿ, ನಿಮಗೆ ಅವನಿಂದ ಹಣಬೇಕು. When Rome was burning Nero was fiddling" ಇದು ಅಕ್ಷರಶ ಮೈಸೂರು ರಾಜ್ಯದಲ್ಲಿ ನಡೆಯುತ್ತಿದೆ. ದೇಶ ಅಗ್ನಿ ಜ್ವಾಲೆಯಲ್ಲಿ ಬೇಯುತ್ತಾ ಇರುವಾಗ; ಜನರು ಅಗ್ನಿಜ್ವಾಲೆಗೆ ತುತ್ತಾಗಿರುವಾಗ ನೀವು ತೆರಿಗೆಯನ್ನು

(ಶ್ರೀ ಎಸ್. ಶಿವಪ್ಪ)

ಹಾಕುವ ಸಾಹಸ ಮಾಡುತ್ತಿದ್ದೀರಿ. ನೀವು ಪ್ರಜಾಪ್ರತಿನಿಧಿಗಳು; ರೈತನಿಗೆ ಗಂಡಾಂತರ ಒದಗಿರುವ ಸಮಯದಲ್ಲಿ ಅವನ ಮೇಲೆ ತೆರಿಗೆಯನ್ನು ಹೇಗೆ ಹಾಕುತ್ತೀರಿ? ಯಾವ ಕಾರಣದಿಂದ ಯಾವ ಮಮತೆಯಿಂದ ಹಾಕುತ್ತೀರಿ ಎಂದು ನಾವು ಹಣಕಾಸಿನ ಸಚಿವರನ್ನು ಕೇಳುತ್ತೇವೆ. ನಿಜ, ನಿಮಗೆ ಹಣಕಾಸಿನ ಸ್ಥಿತಿ ಕಟ್ಟಿರಬಹದು. ನಿಮಗೆ ಹಣ ಬೇಕಾಗಿರಬಹುದು, ಅನೇಕ ಯೋಜನೆಗಳು ಕಾರ್ಯಗತ ಮಾಡಬೇಕಾಗಿರಬಹುದು. ಆದರೆ ಯಾವ ತೆರಿಗೆ ಮನುದೆಗಳನ್ನು ಯಾವ ಕಾಲದಲ್ಲಿ ಯಾರ ಮೇಲೆ, ಹಾಕಬೇಕು, ಯಾವ ವರ್ಗ ತೆರಿಗೆ ಭಾರವನ್ನು ಹೊರತಕ್ಕ ಶಕ್ತಿ ಹೊಂದಿದೆಯೋ, ಅದರ ಮೇಲೆ ಹಾಕಬೇಕು. ಹೊಟ್ಟೆಗೆ ಅನ್ನ ಇಲ್ಲ ಎಂದು ಕಷ್ಟಪಡುತ್ತಾ ಇರುವಾಗ ಅವನ ಮೇಲೆ ತೆರಿಗೆ ಹಾಕೋಣ ಎಂದರೆ ಎಂತಹ ತೆರಿಗೆ ನೀತಿ ಎಂದು ನಾನು ಕೇಳುತ್ತೇನೆ. ಈ ಸರ್ಕಾರ ಜನತೆಯ ಪ್ರತಿಕ್ರಿಯೆಯನ್ನು ಪ್ರತಿಬಿಂಬಿಸುವ ಶಕ್ತಿಯನ್ನು ಹೊಂದಿದೆಯೇ ಎಂದು ಕೇಳುತ್ತೇನೆ. ನಾನು ಒಂದು ಸವಾಲು ಹಾಕುತ್ತೇನೆ. ನಾವು ನೀವೂ ಎಲ್ಲರೂ ಕೂಡ ಈ ವಿಷಯದ ಮೇಲೆ ರಾಜೀನಾಮೆ ಕೊಡೋಣ. ನಮ್ಮ ನಿಮ್ಮ ಕ್ಷೇತ್ರಗಳಿಗೆ ಹೋಗಿ ಉಭಯತ್ರರೂ ಜನರನ್ನು ಕೇಳೋಣ. ಅವರು ಒಪ್ಪಿದರೆ ಈ ತೆರಿಗೆ ಹಾಕಿ ಅದಿಲ್ಲದಿದ್ದರೆ, ನೀವು ನಿಮ್ಮ ತೆರಿಗೆದಾರರಿಗೆ ಮೋಸ ಮಾಡಿ ಅವರ ಓಟನ್ನು ಪಡೆದು ಅವರ ಹಿಂದುಗಡೆ ಬಾಕು ಹಾಕುವ ಶಕ್ತಿ ನಿಮಗೆ ಯಾರು ಕೊಟ್ಟರು ಎಂದು ನಾನು ಕೇಳಬೇಕಾಗಿದೆ. ನಿಜ ರೈತರಲ್ಲಿ ಸಂಘಟನೆ ಇಲ್ಲ, ಬಾಯಿ ಶಕ್ತಿ ಇಲ್ಲ, ವಾದ ಮಾಡುವ ಶಕ್ತಿ ಇಲ್ಲ. ದೇಶದಲ್ಲಿ ಏನು ಆಗುತ್ತಿದೆ ಎನ್ನುವ ವಿಚಾರದಲ್ಲಿ ರೈತನಲ್ಲಿ ಆಜ್ಞಾನ ಇರಬಹುದು. ಆದರೆ ಇವೊತ್ತಿನ ದಿವಸ ಅವನನ್ನು ರಕ್ಷಣೆ ಮಾಡುತ್ತೇವೆ ಎಂದು ಪ್ರತಿಜ್ಞೆ ಮಾಡಿ ಶಾಸನ ಸಭೆಗೆ ಬಂದಿದ್ದೀರಿ. ನೀವು ಏನು ಪ್ರತಿಜ್ಞೆಯನ್ನು ಕೊಟ್ಟು ಬಂದಿದ್ದೀರೋ ಅದನ್ನು ಎಷ್ಟರಮಟ್ಟಿಗೆ ಪರಿಪಾಲನೆ ಮಾಡಿದ್ದೀರಿ ಎಂದು ನಿಮ್ಮ ಹೃದಯ ಮುಟ್ಟಿ ಹೇಳಿ. ಇದರಲ್ಲಿ ರಾಜಕೀಯ ಇಲ್ಲ. ಇದು ಒಂದು ಚುನಾವಣೆ ಅವತಾರವಲ್ಲ. ಇದು ಮನುಷ್ಯತ್ವದ ಪ್ರಶ್ನೆ, ರೈತನ ಅಳಿವು ಉಳಿವಿನ ಪ್ರಶ್ನೆಯಾಗಿದೆ. ಅವನು ಈ ತೆರಿಗೆ ಭಾರ ಹೊರುವ ಶಕ್ತಿ ಹೊಂದಿದ್ದಾನೆಯೇ ಎನ್ನುವ ಈ ಪ್ರಶ್ನೆ ಇದು ರಾಜಕೀಯ ಅಲ್ಲ. ಇದು ವಿರೋಧ ಪಕ್ಷದವರಿಗೆ ಮಾತ್ರ ಸಂಬಂಧಪಡುವುದಿಲ್ಲ. ಇದು ಎಲ್ಲರಿಗೂ ಸಂಬಂಧಪಟ್ಟದ್ದು. ನಮ್ಮ ಹಿಂದಿರತಕ್ಕ ರೈತರ ರಕ್ಷಣೆಯನ್ನು ಮಾಡಬೇಕಾದುದು ನಮ್ಮ ನಿಮ್ಮ ಪವಿತ್ರವಾದ ಜವಾಬ್ದಾರಿ ಎಂದು ಹೇಳುತ್ತೇನೆ. ಇಲ್ಲಿ ಇರತಕ್ಕ ಶಾಸನಸಭೆಯ ಸದಸ್ಯರು ಈ ಪಕ್ಷ ಭೇದವನ್ನು ಬಿಟ್ಟು ರೈತ ಒಂದೇ ವರ್ಗ ಎನ್ನುವ ವಾದವನ್ನು ದೇಶದ ಮುಂದೆ ಹೇಳಬೇಕಾಗಿದೆ. ಪಕ್ಷ ವಾದ ಹೇಳಬೇಕಾಗಿಲ್ಲ. ರೈತವರ್ಗದ ವಾದ ಮಾಡಬೇಕಾಗಿದೆ. ಕ್ಲಾಸ್‌ಲೆಸ್, ಕ್ಯಾಸ್ಟ್‌ಲೆಸ್ ಸೊಸೈಟಿ ಎಂದು ಹೇಳುತ್ತಿದ್ದೇವೆ. ಆ ಸಮಾಜವಾದ ತತ್ವಕ್ಕೆ ನೀವು ಮನ್ನಣೆ ಕೊಡಬೇಕಾಗಿದೆ, ಈ ಮನುದೆಗೆ ತಮ್ಮ ಬೆಂಬಲಕ್ಕಾಗಿ ಪ್ರಜಾಪ್ರತಿನಿಧಿಗಳನ್ನು ಪಡೆದು ತನ್ಮೂಲಕ ಪ್ರಜೆಗಳ ಅಭಿಪ್ರಾಯ ಏನು ಇದೆ, ಎಂದು ಅಳತೆ ಮಾಡಬೇಕಾಗಿದೆ. ನಾನಾದರೂ ಕೂಡ ಅನೇಕ ಸಾರಿ ಹೇಳಿದ್ದೇನೆ ಕಂದಾಯ ಎನ್ನತಕ್ಕದ್ದು ಕಂದಾಚಾರ ಪದ್ಧತಿ, ದೇಶದಲ್ಲಿ ಯಾವ ತೆರಿಗೆಯೂ ಕೂಡ ಇಲ್ಲದೆ ಇರತಕ್ಕ ಪೂರ್ವಕಾಲದಲ್ಲಿ ಪಾಳೆಯಗಾರರು ಭೂಕಂದಾಯದಿಂದ ಬರುವ ಹಣದಿಂದಲೇ ರಾಜ್ಯದ ಆಡಳಿತವನ್ನು ನಡೆಸತಕ್ಕ ಕಾಲ ಅದು. ಭೂ ಕಂದಾಯದ ಮೇಲೆಯೇ ರಾಜ್ಯವನ್ನು ನಡೆಸುತ್ತಾ ಇದ್ದರು. ಈಗ ಆ ಪರಿಸ್ಥಿತಿ ಇಲ್ಲ, ಇವೊತ್ತು ತೆರಿಗೆ ನೀತಿ ಬಹಳವಾಗಿ ಬದಲಾವಣೆಯಾಗಿದೆ. ತೆರಿಗೆಯನ್ನು ನಾನಾ ರೂಪದಲ್ಲಿ ಕೊಡುತ್ತಿದ್ದಾರೆ. ಅವನು ಹಾಕಿರತಕ್ಕ ಬಟ್ಟೆಮೇಲೆ ತೆರಿಗೆ ಕೊಡುತ್ತಾ ಇದ್ದಾನೆ. ಕೊಂಡುಕೊಳ್ಳತಕ್ಕ ವಸ್ತುವಿನ ಮೇಲೆ ರೈತ ತೆರಿಗೆ ಕೊಡುತ್ತಾ ಇದ್ದಾನೆ. ಅವನು ಸರ್ಕಾರದ ಖಜಾನೆಗೆ ದಿನಂಪ್ರತಿ ಹಣ ತುಂಬುತ್ತಾ ಇದ್ದಾನೆ. ಸರ್ಕಾರ ಯಶಸ್ವಿಯಾಗಿ ನಡೆಯಬೇಕಾದರೆ ರೈತನನ್ನು ಅವಲಂಬಿಸಿ ಸರ್ಕಾರ ನಡೆಸತಕ್ಕ ಕಾಲ ಹೋಯಿತು. ಭೂ ಕಂದಾಯ ಬಹಳ ಹಳೆಯ ಪದ್ಧತಿ ಆಗಿದೆ. ಈಗ ತೆರಿಗೆಯ ನೀತಿ, ರೂಪ ಹೊಸ ಸ್ವರೂಪ ತಾಳಿದೆ. ಇಂತಹ ಕಾಲದಲ್ಲಿ ಹಳೇ ಕಾಲದ ಭೂ ಕಂದಾಯ ಮತ್ತು ಅದರ ಮೇಲೆ ಸರ್‌ಚಾರ್ಜು ಹಾಕೋಣ ಎಂದರೆ, ಅದು ಅಶಾಸ್ತ್ರೀಯ ಕಂದಾಯವನ್ನು ವಜಾ ಮಾಡಿ, ಹೊಸ ರೂಪವನ್ನು ಕೊಟ್ಟು ತೆರಿಗೆಯ ನೀತಿ ಬದಲಾಯಿಸಬೇಕಾಗಿದೆ. ನಮ್ಮ ಯುವಕರು ಹಣಕಾಸಿನ ಸಚಿವರಾಗಿರುವುದರಿಂದ ಅದಕ್ಕೆ ಹೊಸ ರೂಪ ಕೊಡುತ್ತಾರೆಂದು ಭಾವಿಸಿಕೊಂಡಿದ್ದೆ. ಇದನ್ನು ಬಿಟ್ಟು ಹಳೇ ಕಾಲದ ಕಂದಾಯದ ಮೇಲೆಯೇ ಪುನಃ ಕಂದಾಯ ಜಾಸ್ತಿಮಾಡಿ, ಓಬೀರಾಯನ ಕಾಲದ ಹಾದರ್ನೇ ಇವೊತ್ತು ಹಾದಿದಂತಾಗಿದೆ. ಇದನ್ನು ಖಂಡಿತ ಯಾರೂ ಒಪ್ಪತಕ್ಕ ಮಾತಲ್ಲ. ರೈತ ದೇಶದ ಉತ್ಪತ್ತಿ ಸಾಧಕವಾಗಿದ್ದಾನೆ. ಜೈ ಜವಾನ್, ಜೈ ಕಿಸಾನ್ ಎಂದು ಹೇಳುತ್ತೇವೆ. ಇವೊತ್ತು ಜವಾನರಿಗೆ ರಾಷ್ಟ್ರರಕ್ಷಣೆಯನ್ನು ಕಾಪಾಡತಕ್ಕವನಿಗೆ ಎಂತಹ ಸವಲತ್ತುಗಳನ್ನು ಕೊಡುತ್ತಿ

ದ್ದೇವೆ, ಎಂತಹ ಅನುಕೂಲವನ್ನು ಮಾಡಿಕೊಟ್ಟಿದ್ದೇವೆ ? ಅವನಿಗೆ ಉಚಿತ ವಿದ್ಯಾಭ್ಯಾಸ ಕೊಡುತ್ತೇವೆ. ಜೈ ಜವಾನನಿಗೆ, ಯೋಧನಿಗೆ, ಏನು ಸಹಾಯ ಮಾಡುತ್ತೇವೆ, ಅದನ್ನೇ ಸಾಮಾನ್ಯ ಅನ್ನದಾತ ಭೂಮಿಯ ಯೋಧನಿಗೆ ಜೈ ಕಿಸಾನಿನಿಗೆ ಏನು ಮಾಡುದ್ದೀರಿ ? ಅವನಿಗೆ ಶಿಕ್ಷೆ ಕೊಡುತ್ತಾ ಇದ್ದೀರಿ. ನೀವು ಅವನು ಕೊಡತಕ್ಕ ಕಂದಾಯ ವಜಾ ಮಾಡುವುದು ಇರಲಿ, ಅವನ ತಲೆಮೇಲೆ ಜುರ್ಮಾನೆ ಹಾಕಿದ್ದೀರಿ. ಒಂದು ಕಂದಾಯ ಕೊಡುವ ಬೇಳೆಯಲ್ಲಿ ಎರಡು ಕಂದಾಯ ಕೊಡಿ ಎಂದು ಹೇಳುತ್ತೀರಿ. ಇವೊತ್ತು ಅನ್ನದ ಸಮಸ್ಯೆ ಬಗೆಹರಿಯಬೇಕಾಗಿದೆ. ನಮ್ಮ ದೇಶದಲ್ಲಿ ಇರತಕ್ಕ ಭೂಮಿಯಿಂದ ಹೆಚ್ಚು ಉತ್ಪಾದನೆ ಮಾಡತಕ್ಕಂಥದ್ದು ನಮ್ಮ ಕರ್ತವ್ಯ. ಇವೊತ್ತು ಅನ್ನವನ್ನು ಉತ್ಪಾದನೆ ಮಾಡತಕ್ಕ ರೈತನಿಗೆ ನಾವು ಪುರಸ್ಕಾರ ಕೊಡಬೇಕಾಗಿದೆ. ಏನು ಏನು ಸವಲತ್ತು ಕೊಡಬೇಕೋ ಅದನ್ನು ಕೊಡುವುದು ಸರ್ಕಾರದ ಕರ್ತವ್ಯ. ರೈತರು ಕೊಡುವ ಕಂದಾಯ ವಜಾ ಮಾಡಿದರೆ ಆಗ್ಗೆ ಜೈ ಕಿಸಾನ ಎಂಬ ಘೋಷಣೆಗೆ ಮನ್ನಣೆ ಕೊಟ್ಟ ಹಾಗೆ ಆಗುತ್ತದೆ. ಈ ಮಸೂದೆಯಿಂದ ಆ ರೀತಿ ಹೇಳತಕ್ಕ ಘೋಷಣೆಯ ಹಕ್ಕನ್ನು ನೀವು ಕಳೆದುಕೊಂಡಿದ್ದೀರಿ. ಅಮೇರಿಕಾ ದೇಶದಿಂದ ಆಹಾರ ಧಾನ್ಯ ತರಿಸುವುದಕ್ಕಾಗಿ ಕೋಟಿ ಕೋಟಿ ಗಟ್ಟಲೆ ಹಣ ಕೊಡುತ್ತಿದ್ದೀರಿ. ಪರದೇಶಗಳಿಗೆ ಕೈ ಚಾಚಿ ಆಹಾರ ಧಾನ್ಯ ಕೇಳುತ್ತಿದ್ದೀರಿ. ಕೋಟಿ ಕೋಟಿ ಗಟ್ಟಲೆ ಸಾಲ ಮಾಡಿ ಆಹಾರ ತರುತ್ತಿದ್ದೀರಿ. ಅದೇ ಹಣವನ್ನು ರೈತನಿಗೆ ಕೊಡಿ. ಐದು ಕೋಟಿ ರೂಪಾಯಿ ರೈತನಿಗೆ ಕೊಟ್ಟರೆ ರೈತನು ಐವತ್ತು ಕೋಟಿ ರೂಪಾಯಿ ಆಹಾರ ಉತ್ಪತ್ತಿ ಮಾಡುತ್ತಾನೆ. ಇದರಿಂದ ನಿಮಗೆ ನಂಬಿಕೆ ಧೈರ್ಯ ಬರುತ್ತದೆ. ಆಹಾರ ಬೆಳೆದು ಅನ್ನ ಕೊಡತಕ್ಕಂಥ ರೈತನ ಬಗ್ಗೆ ನತ್ ಪ್ರೇರಿತರಾಗಿ ನದ್ಭಾವನೆಯುಳ್ಳವರಾಗಿರಬೇಕು. ರೈತನ ಮೇಲೆ ಗದಾ ಪ್ರಹಾರ ಮಾಡತಕ್ಕಂಥ ಮಸೂದೆಯನ್ನು ತಂದಿದ್ದೀರಿ. ಇದರಿಂದ ಏನಾಗಿದೆ ಎಂದರೆ ನಿಮ್ಮ ಘೋಷಣೆ ಕಿಸಾನ್ ಮರ್ ಗಯಾ ಹೈ ಎಂದು ಆಗಿದೆ. ಇದು ಯಾವ ನ್ಯಾಯ ? ತೆರಿಗೆ ಭಾರ ಹೆಚ್ಚಾಗಿ ಇಂದು ರೈತನಿಗೆ ಹೊಟ್ಟೆಗೆ ಹಿಟ್ಟಿಲ್ಲ. ರೈತನು ದನಗಳನ್ನು ಮಾರಿ ಕೊಂಡಿದ್ದಾನೆ. ಇಂಥ ಸಂದರ್ಭದಲ್ಲಿ ರೈತನಿಗೆ ಸರಕಾರ ಏನು ಸಹಾಯ ಮಾಡಿದೆ ? ಕಂದಾಯ ವಸೂಲ್ಮಾಡತಕ್ಕ ಸಾಹಸ ಮಾತ್ರ ಸರಕಾರ ಮಾಡುತ್ತಿದೆ. ರೈತನು ಏನೂ ಮಾಡಲಾರನು ಎಂದು ನೀವು ತಿಳಿದು ಕೊಂಡಿದ್ದೀರಿ. ಆದರೆ ಇಂದು ಒಂದು ವಿಚಿತ್ರ ವಾತಾವರಣ ದೇಶದಲ್ಲಿ ಉಂಟಾಗಿದೆ. ಕಲ್ಲಿಗೂಕೂಡ ಚಲನವಲನ ಮಾಡತಕ್ಕ ಶಕ್ತಿ ಬಂದಿದೆ. ಇಂಥ ಸಂದರ್ಭದಲ್ಲಿ ಮುಂದೆ ಏನಾಗಬಹುದು ಎಂಬುದನ್ನು ತಾವು ಕಾಣಬಹುದು. ಇಂದು ನೀವು ಶಾಂತಿಯನ್ನು ಅಲ್ಲೋಲಕಲ್ಲೋಲ ಮಾಡುತ್ತಿದ್ದೀರಿ. ನೆಮ್ಮದಿಯಿಂದ ಕೆಲಸ ಮಾಡತಕ್ಕಂಥವರನ್ನು ಹೊಡೆದು ಎಬ್ಬಿಸುತ್ತಿದ್ದೀರಿ. ಈ ಮಸೂದೆ ಮೂಲಕ ಮಾಡುತ್ತಿರುವ ಗದಾ ಪ್ರಹಾರ ಅದು ನಿಮಗೇ ವಾಪಸ್ಸು ಆದರೆ ನೀವು ಎಲ್ಲಿ ಇರುತ್ತೀರಿ ಎಂಬುದನ್ನು ಸ್ವಲ್ಪ ಯೋಚನೆ ಮಾಡಿ. ಸರಕಾರಕ್ಕೆ ನಾನು ಎಚ್ಚರಿಕೆ ಕೊಡ ಬಯಸುತ್ತೇನೆ. ಸಾರ್ವಜನಿಕ ಅಭಿಪ್ರಾಯ ಏನು ಇದೆ ಎಂಬುದು ಗೊತ್ತಾಗಬೇಕಾದರೆ ಇನ್ನು ಎಂಟು ಹತ್ತು ತಿಂಗಳು ಹೋಗಬೇಕು. ಸಾರ್ವಜನಿಕರ ಅಭಿಪ್ರಾಯ ಕೇಳಿರಿ ಅವರ ಮುಂದೆ ಈ ಮಸೂದೆಯನ್ನು ಇಡಿರಿ. ಸಾರ್ವಜನಿಕರ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟರೆ ನಿಮಗೆ ಅಧಿಕಾರ ಬರುತ್ತದೆ, ಶಾಸನ ಮಾಡತಕ್ಕಂಥ ಸಾಮರ್ಥ್ಯ ಬರುತ್ತದೆ. ನಿಮ್ಮ ಚುನಾವಣೆ ಘೋಷಣೆಯಲ್ಲಿ ಕಂದಾಯ ಮನ್ನಾ ಮಾಡುತ್ತೇವೆಂದು ಹೇಳಿದ್ದೀರಿ.. ಆ ರೀತಿ ಹೇಳಿರತಕ್ಕಂಥ ನಿಮಗೆ ಕಂದಾಯ ಜಾಸ್ತಿ ಮಾಡತಕ್ಕ ಅಧಿಕಾರ ಏನು ಇದೆ ? 1947 ಚುನಾವಣೆ ಘೋಷಣೆ ಪ್ರಕಾರ ಸಾರ್ವಜನಿಕರ ಅಭಿಪ್ರಾಯ ತೆಗೆದುಕೊಂಡು ಮುಂದೆ ಬರತಕ್ಕ ಹೊಸ ಶಾಸನ ಸಭೆಯಲ್ಲಿ ಇದನ್ನು ಚರ್ಚೆಮಾಡೋಣ. ಈಗ ಸಾರ್ವಜನಿಕರ ಅಭಿಪ್ರಾಯ ತಿಳಿದುಕೊಳ್ಳಲು ಇದನ್ನು ಸರ್ಕ್ಯುಲೇಟ್ ಮಾಡುವುದಕ್ಕೆ ಒಪ್ಪಬೇಕು ಯಾಕಂದರೆ ನೀವು ಪ್ರಜಾಪ್ರಭುತ್ವದ ತತ್ವಕ್ಕೆ ಒಳಪಟ್ಟಿದ್ದೀರಿ. ಆದುದರಿಂದ ಈ ಮಸೂದೆಯನ್ನು ಮುಂದಿನ ಶಾಸನ ಸಭೆಯಲ್ಲಿ ಪ್ರಜೆಗಳ ಮುಂದೆ ತರಬೇಕು ಎಂದು ಹೇಳಿ ಸಭಾಪತಿಗಳವರ ಮುಖಾಂತರ ಅರ್ಥ ಸಚಿವರಿಗೆ ಸೂಚನೆ ಮಾಡಿ ಈಗ ಈ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

†ಶ್ರೀ ಗಾಂಜಿ ವೀರಪ್ಪ (ಹರಿಹರ).—ಮಾನ್ಯ ಸಭಾಧ್ಯಕ್ಷರೇ, ನಾನು ಅಡಳಿತ ಪಕ್ಷಕ್ಕೆ ಸೇರಿದವನಾಗಿರುವುದರಿಂದ ಈ ಮಸೂದೆ ನಾನು ಬೆಂಬಲ ಕೊಟ್ಟೇ ಕೊಡುತ್ತೇನೆಂದು ಬಹುಶಃ ನನ್ನ ಮಾನ್ಯ ಸ್ನೇಹಿತರು ತಿಳಿದು ಕೊಂಡಿರಬಹುದು. ನನ್ನ ವೈಯಕ್ತಿಕ ಅಭಿಪ್ರಾಯಗಳನ್ನು ಹೇಳದೆ ಅಡಳಿತ ಪಕ್ಷಕ್ಕೆ ಸೇರಿದವನಾದ್ದರಿಂದ ಇದನ್ನು ಅನುಮೋದಿಸುತ್ತೇನೆಂದು ಯಾರೂ ತಿಳಿದು ಕೊಳ್ಳಬಾರದು. ಇನ್ನು ಎರಡನೇಯದಾಗಿ ನಾನು ರೈತನಲ್ಲ. ರೈತನ ವಿಚಾರ ನನಗೆ ಗೊತ್ತಿಲ್ಲ. ಅವರ ಬಗ್ಗೆ ಹೇಳುವ ಶಕ್ತಿ ನನಗೆ ಇದೆಯೇ ಎಂಬ ಇನ್ನೊಂದು ಶಂಕೆ ಇದೆ. ನಾನು ರೈತನಾಗಿದ್ದೇನೆ. ನನ್ನ ಕ್ಷೇತ್ರದ ರೈತರಿಂದ ಚುನಾಯಿತನಾಗಿ ಇಲ್ಲಿಗೆ ಬಂದಿದ್ದೇನೆ. ನನ್ನ ಕ್ಷೇತ್ರದಲ್ಲಿ ಶೇಕಡ 80ರಷ್ಟು

(ಶ್ರೀ ಗಾಂಜಿ ವೀರಪ್ಪ)

ಭಾಗ ರೈತರು ಇದ್ದಾರೆ. ನಾನು ವಕೀಲನಾಗಿರುವುದರಿಂದ ಎಂಥ ಕೇಸು ಇದ್ದರೂ ಕೂಡ ಅರ್ಗ್ಯು ಮಾ ಬಲ್ಲೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ.

ವಿರೋಧ ಪಕ್ಷದ ನಾಯಕರಾದ ಮಾನ್ಯ ಶ್ರೀ ಶಿವಪ್ಪನವರು ಒಂದು ಮಾತು ಹೇಳಿದರು. ಲ್ಯಾಂಡ್ ರೆವೆನ್ಯೂ ವಸೂಲ್ಮಾಡುವ ಪದ್ಧತಿ ಬಹಳ ಹಳೆಯ ಕಾಲದ್ದು. ಬೇರೆ ಆದಾಯಕ್ಕೆ ಅವಕಾಶವಿಲ್ಲದಾಗ್ಗೆ ಲ್ಯಾಂಡ್ ರೆವೆನ್ಯೂ ಬಹಳ ದೊಡ್ಡ ಆದಾಯವಾಗಿತ್ತು ಎಂದು ಸರಕಾರ ಮುಖ್ಯವಾಗಿ ತಿಳಿದುಕೊಂಡಿತ್ತು. ಈಗಿನ ಕಾಲದಲ್ಲಿ ಸರಕಾರಕ್ಕೆ ಬೇರೆ ಬಾಬುನಿಂದ ವರಮಾನ ಬರುತ್ತದೆ ಆದುದರಿಂದ ಕಂದಾಯ ವಜಾ ಮಾಡಬೇಕು ಎಂದು ಅವರು ಹೇಳಿದರು. ನನ್ನ ಮಟ್ಟಿಗೆ ವೈಯಕ್ತಿಕವಾಗಿ ಹೇಳಬೇಕಾದರೆ ಅಂಥ ಕಾಲ ಬೇಗ ಬರಬೇಕು. ಆಡಳಿತ ಪಕ್ಷದ ನಮ್ಮ ನಾಯಕರೂ ಕೂಡ ಅದೇ ರೀತಿಯಾಗಿ ಹೇಳಿದ್ದಾರೆ. ಇದು ತಕ್ಷಣ ಆಗಬೇಕು ಎಂದು ಅಲ್ಲ. ಅದನ್ನು ಮಾಡುವುದಾದರೆ ಯಾವ ರೀತಿ ಮಾಡಬೇಕು ಎಂಬುದನ್ನು ಯೋಚನೆ ಮಾಡಿ ನಮ್ಮ ಸರಕಾರ ಮಾಡಲಿ. ಇವತ್ತಿನ ದಿವಸ ದೇಶದಲ್ಲಿ ಕಷ್ಟದ ಪರಿಸ್ಥಿತಿ ಇದೆ. ಎರಡು ಮೂರು ವರ್ಷ ಮಳೆ ಇಲ್ಲದೆ ರೈತ ಬಹಳ ಕಷ್ಟದಲ್ಲಿದ್ದಾನೆ. ಬರಿ ಜಮೀನಿನಿಂದ ಬರತಕ್ಕ ವರಮಾನದ ಮೇಲೆ ರೈತನ ಜೀವನ ಅವಲಂಬಿಸಿದೆ. ರೈತನಿಗೆ ಬಹಳ ಕಷ್ಟವಿದೆ. ಸರಕಾರ ಈ ಕಂದಾಯ ಹಾಕಬೇಕು ಎನ್ನುವಾಗ್ಗೆ ಈ ವಿಚಾರ ಗಮನದಲ್ಲಿಟ್ಟುಕೊಂಡು ಈ ಮಸೂದೆ ತಂದಿದ್ದಾರೆ. ಸರಕಾರದ ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ಮಂತ್ರಿಗಳಾಗಲಿ, ಆಡಳಿತ ಪಕ್ಷದ ನಾಯಕರಾಗಲಿ ಈ ಕಂದಾಯ ಸರಕಾರ ಹಾಕಬೇಕು, ರೈತನಿಗೆ ಕೊಡತಕ್ಕ ಶಕ್ತಿ ಇದೆ, ರೈತನ ಪರಿಸ್ಥಿತಿ ಚೆನ್ನಾಗಿ ಇದೆ ಆದುದರಿಂದ ಇದನ್ನು ಮಾಡಲಿ ಎಂದು ಹೇಳತಕ್ಕ ಮಾತು ಸರಿಯಲ್ಲ. ನಮಗೂ ಕೂಡ ಎರಡು ಮೂರು ವರ್ಷದಿಂದ ಕಷ್ಟ ಬಂದಿದೆ. ಸರ್‌ಚಾರ್ಜು ಹಾಕುವುದು ನಮಗೂ ಕೂಡ ಇಷ್ಟವಿಲ್ಲ. ಸರಕಾರದವರು ಈಗ ಒಂದು ತಿದ್ದುಪಡಿ ತಂದಿದ್ದಾರೆ. ಈ ತಿದ್ದುಪಡಿ ಮೂಲಕ ಸರ್‌ಚಾರ್ಜು ಮೂರನೇ ಒಂದು ಭಾಗ ಇರಬೇಕು ಮತ್ತು ಇದು ಜಾರಿಯಲ್ಲಿರತಕ್ಕ ಅವಧಿ ಒಂದು ವರ್ಷ ಮಾತ್ರ ಇರಬೇಕು ಎಂದಿದೆ. ಶ್ರೀ ಜಿ. ವಿ. ಗೌಡರು ಕಳಿಸಿದ ಅಮೆಂಡಮೆಂಟ್ ಪ್ರಕಾರ 50 ಪರ್ಸೆಂಟಿಗೆ ರೆಡ್ಯೂಸ್ ಮಾಡಿದರೆ ಸಾಕು ಎಂದು ಅವರು ಹೇಳಿದ್ದಾರೆ. ಶ್ರೀ ಕೇಶವಮೂರ್ತಿಯವರು ಕೂಡ 50 ಪರ್ಸೆಂಟ್ ಇರಲಿ ಎಂದು ತಮ್ಮ ಅಮೆಂಡಮೆಂಟ್ ಮೂಲಕ ಸೂಚಿಸಿದ್ದಾರೆ. ಆದರೆ ಸರಕಾರದವರ ಈ ಅಮೆಂಡ್‌ಮೆಂಟಿನಿಂದ ನನಗೆ ಸಮಾಧಾನವಾಗಿದೆ. ರೈತರ ಆರ್ಥಿಕ ಮಟ್ಟ ಮುಖ್ಯವಾಗಿ ಗಮನದಲ್ಲಿಟ್ಟುಕೊಂಡು ಅವರ ತೊಂದರೆ ಏನಿವೆ ಎಂಬುದನ್ನು ತಿಳಿದುಕೊಂಡು ಈ ತೀರ್ಮಾನ ನಾವು ತೆಗೆದುಕೊಂಡಿದ್ದೇವೆ. ಈ ಮೂರು ತಿದ್ದುಪಡಿಗಳನ್ನೂ ನೋಡಿದರೆ ವಿರೋಧ ಪಕ್ಷದವರು ಶೇಕಡ 50ರಷ್ಟು ಸರ್‌ಚಾರ್ಜ್ ಹಾಕಿದರೆ ಸಾಕು ಎಂದು ತೃಪ್ತಿಪಟ್ಟು ತಿದ್ದುಪಡಿಗಳನ್ನು ಕಳಿಸಿರುವಾಗ ನಮ್ಮ ಆರ್ಥಿಕ ಮಂತ್ರಿಗಳು ಮೂರನೆ ಒಂದು ಭಾಗಕ್ಕೆ ಕಡಮೆ ಮಾಡುತ್ತೇವೆ ಎಂದು...

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಜಿ. ವಿ. ಗೌಡರ ತಿದ್ದುಪಡಿ ಮೂಲ ಕಂದಾಯದ ಮೇಲೆ ಮೇಲೆ ಸೇಕಡ 50ರಷ್ಟು ಸರ್ಚಾರ್ಜ್ ಹಾಕಬಹುದು ಎಂದು, ರಿವೈಸ್ ಆದ ಅಸೆಸ್‌ಮೆಂಟ್ ಮೇಲೆ ಅಲ್ಲ.

ಶ್ರೀ ಗಾಂಜಿ ವೀರಪ್ಪ.—ಈ ಸಭೆಯಲ್ಲಿ ತೆರಿಗೆ ಹಾಕಬೇಕು ಎನ್ನುವುದರಲ್ಲಿ ತತ್ವತಃ ಭಿನ್ನಾಭಿಪ್ರಾಯ ಕಾಣಲಿಲ್ಲ. ವಿರೋಧ ಪಕ್ಷದವರು ಸೇಕಡ 50ರಷ್ಟು ತೆರಿಗೆಯನ್ನು ಇಳಿಸಿದರೆ ಸಾಕು ಎಂದು ಹೇಳುವಾಗ ಆರ್ಥಿಕ ಮಂತ್ರಿಗಳು ಅದನ್ನು ಮೂರನೆ ಒಂದು ಭಾಗಕ್ಕೆ ಇಳಿಸಬೇಕೆಂದು ತಿದ್ದುಪಡಿಯನ್ನು ಸೂಚಿಸಿದ್ದಾರೆ. ಸರ್ಕಾರದ ಆರ್ಥಿಕ ಪರಿಸ್ಥಿತಿ ಬಹಳ ಕಷ್ಟದಲ್ಲಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಈಗ ಅಷ್ಟೇ ಕಷ್ಟದ ಇನ್ನೊಂದು ಚಿತ್ರವನ್ನು ನೋಡುವುದರಲ್ಲಿಯೂ ಕಾಣುತ್ತದೆ. ರೈತರ ಅಭಿವೃದ್ಧಿಗೆ, ಆಹಾರವನ್ನು ಹೆಚ್ಚು ಬೆಳೆದು ದೇಶದ ಸಂಪತ್ತನ್ನು ಹೆಚ್ಚು ಮಾಡಲು ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಅಷ್ಟೇ ಅಲ್ಲ, ಕೆಲವು ಕಡೆ ಕ್ಷಾಮದ ಭಯ ಇರುವುದರಿಂದ ಸರ್ಕಾರದವರು ಆದಷ್ಟು ಜಾಗ್ರತೆ ಪರಿಹಾರ ಕಾರ್ಯಗಳನ್ನು ತೆಗೆದುಕೊಳ್ಳಬೇಕಾಗಿದೆ.

Sri S. M. KRISHNA.—On a point of order, Sir. It is quite amusing to listen to Sri Ganji Veerappa. The only question before this House is whether surcharge should be raised by 100 per cent or the amendment moved yesterday and supported by a few of my colleagues seeking the Bill to be circulated for eliciting public opinion. I do not know why

he is talking about the amendments which are not moved. He seems to be talking through his cap !

Mr. SPEAKER.—The point of order is raised that in the course of the participation in the debate Sri Ganji Veerappa has referred to three amendmeuts to the Bill.

Sri S. GOPALA GOWDA.—Not moved.

Mr. SPEAKER —Is Sri Gopala Gowda giving the ruling ? Amendments have not been moved. But copies of the amendments that are proposed to be moved have been circulated by the office. Anyway there is no point of order in what is said, because wrong arguments, wrong figures, untenable propositions are not covered by the point of order. The House has to take note and say there is no substance. How can I say there is a point of order.? Sri Ganji Veerappa will kindly proceed.

ಶ್ರೀ ಗಾಂಜಿ ವೀರಪ್ಪ.—ನಾನು ಇದನ್ನು ಏತಕ್ಕೋಸ್ಕರ ವಿವರವಾಗಿ ಹೇಳಬೇಕು ಎಂದರೆ, ನನಗೂ ಮೊದಲು ನೂರಕ್ಕೆ ನೂರರಷ್ಟು ಸರ್ಚಾರ್ಜ್ ಹಾಕುವುದು ಸರಿಯೇ ಎಂದು ನನ್ನ ಮನಸ್ಸಿನಲ್ಲಿತ್ತು. ಈಗ ಸರ್ಕಾರದವರು ಒಂದು ತಿದ್ದುಪಡಿಯ ಮುಖಾಂತರ ಅದನ್ನು ಮೂರನೆ ಒಂದು ಭಾಗಕ್ಕೆ ಇಳಿಸಿದ್ದಾರೆ. ಇದೂ ಕೂಡ ಒಂದೇ ಒಂದು ವರ್ಷ ಮಾತ್ರ ವಿಧಿಸಲ್ಪಡಬೇಕು ಎನ್ನುವ ತಿದ್ದುಪಡಿಯನ್ನೂ ತಂದಿದ್ದಾರೆ. ಸರ್ಕಾರದವರು ಎಲ್ಲ ವಿಷಯಗಳನ್ನೂ ಕೂಲಂಕಷವಾಗಿ ಯೋಚನೆ ಮಾಡಿ ಬಹಳ ಜವಾಬ್ದಾರಿಯಿಂದ ತೀರ್ಮಾನ ಮಾಡಿದ್ದಾರೆ. ಆದುದರಿಂದ ಇದನ್ನು ಒಪ್ಪಿಕೊಳ್ಳಬಹುದು ಎಂದು ನಾನು ವಿರೋಧ ಪಕ್ಷದವರಿಗೆ ಹೇಳುತ್ತೇನೆ.

ಈಗ ನಮ್ಮ ಮುಂದೆ ಎರಡು ದೃಶ್ಯವಿದೆ. ಒಂದು ಕಡೆ ಮಳೆ ಬೆಳೆ ಇಲ್ಲದೆ ಜನಗಳಿಗೆ ಬಹಳ ತೊಂದರೆಯಾಗಿ ಏನಾದರೂ ಪರಿಹಾರ ಕಾರ್ಯಗಳನ್ನು ಮಾಡಲೇಬೇಕು ಮತ್ತು ಅದರ ಜೊತೆಗೆ ಹೆಚ್ಚು ಆಹಾರ ಬೆಳೆಯಲು ನಮಗೆ ಪಂಪ್ ಸೆಟ್‌ಗಳು ಬೇಕು, ಬಾವಿಗೆ ಹಣ ಬೇಕು, ನಣ್ಣ ಪುಟ್ಟ ಕೆರೆಗಳ ರಿಪೇರಿ ಮಾಡಲು ಹಣ ಬೇಕು. ಇವುಗಳಿಗೆ ಬೇಕಾದ ಹಣವನ್ನು ಒದಗಿಸಿಕೊಂಡು ಬಹಳ ಜಾಗ್ರತೆಯಾಗಿ ಆಹಾರವನ್ನು ಬೆಳೆದು ಅದರಲ್ಲಿ ಕ್ಷಿಪ್ರ ಫಲಗಳನ್ನು ಪಡೆಯುವಂತೆ ಮಾಡಬೇಕು ಎಂದು ನಾನು ಸರ್ಕಾರವನ್ನು ಕೇಳುತ್ತೇನೆ. ಆ ವಿಚಾರದಲ್ಲಿ ಬಹುಶಃ ನಮಗೂ ಮತ್ತು ವಿರೋಧ ಪಕ್ಷದವರಿಗೂ ಯಾವ ರೀತಿಯ ಭಿನ್ನಾಭಿಪ್ರಾಯವೂ ಇಲ್ಲ. ತುರ್ತುಪರಿಸ್ಥಿತಿ ಬಂದಿರತಕ್ಕ ಸಂದರ್ಭದಲ್ಲಿ ಸರ್ಕಾರದ ವತಿ ಇಷ್ಟು ಕೆಲಸವನ್ನು ಮಾಡದೆ ಇದ್ದಲ್ಲಿ ಜನಗಳಿಗೆ ಬಹಳ ಕಷ್ಟವಾಗುತ್ತದೆ. ಇದಕ್ಕೆಲ್ಲ ಹಣ ಬೇಕು. ಹಣ ಬೇಕಾಗಿರುವಾಗ ತೆರಿಗೆ ಹಾಕುವುದು ಬೇಡ ಎಂದರೆ ಒಂದಕ್ಕೊಂದು ವಿರೋಧಾಭಾಸವಾಗುತ್ತದೆ. ಈ ತೆರಿಗೆ ವಿಧೇಯಕವನ್ನು ಏಕೆ ಅನುಮೋದನೆ ಮಾಡಬೇಕು ಎನ್ನುವುದಕ್ಕೆ ಒಂದೇ ಒಂದು ವಿಷಯ ನನ್ನ ಮನಸ್ಸಿಗೆ ಕಾಣುತ್ತದೆ. ಏನೆಂದರೆ ಈಗ ಸರ್ಕಾರದ ಈಗಿನ ಪರಿಸ್ಥಿತಿಯಲ್ಲಿ ನಮಗೆ ಏನೇನು ಅನುಕೂಲಗಳು ಆಗಬೇಕಾಗಿವೆಯೋ ಎಂದರೆ ಕ್ಷಿಪ್ರದಲ್ಲಿ ಆಹಾರ ಧಾನ್ಯಗಳನ್ನು ಒದಗಿಸಲು ಮತ್ತು ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಅದಕ್ಕೆಲ್ಲ ಹಣವನ್ನು ಒದಗಿಸಬೇಕಾಗುತ್ತದೆ. ಆದ್ದರಿಂದ ಸರ್ಕಾರಕ್ಕೆ ಏನೇ ತೊಂದರೆಯಾದರೂ ಕೂಡ ಸರ್ಚಾರ್ಜ್ ರೂಪದಲ್ಲಿ ವಸೂಲ್ಮಾಡುವ ಹಣವನ್ನು ರೈತರಿಗೋಸ್ಕರವಾಗಿಯೇ ಖರ್ಚುಮಾಡಲು ಮೀಸಲಾಗಿರುವ ಭರವಸೆಯನ್ನು ಸರ್ಕಾರದವರು ಕೊಡಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರಾಜ್ಯದಲ್ಲಿ ಒಂಭತ್ತು ಜನ ಮುಖ್ಯ ಇಂಜಿನಿಯರುಗಳಿದ್ದಾರೆ. ಅವರ ಸಂಖ್ಯೆಯನ್ನು ಮೂರಕ್ಕೆ ಏಕೆ ಇಳಿಸಬಾರದು ?

ಶ್ರೀ ಗಾಂಜಿ ವೀರಪ್ಪ.—ಬಹುಶಃ ಈ ತೆರಿಗೆಯಿಂದ ಬರುವ ಹಣವನ್ನು ರೈತರಿಗೋಸ್ಕರ ಹೆಚ್ಚು ಆಹಾರ ಬೆಳೆಯುವುದಕ್ಕೋಸ್ಕರ ಖರ್ಚು ಮಾಡುತ್ತೇವೆಂದು ಭರವಸೆಯನ್ನು ಕೊಟ್ಟರೆ ವಿರೋಧ ಪಕ್ಷದವರೂ ಖಂಡಿತವಾಗಿ ಒಪ್ಪಬಹುದು. ಆದುದರಿಂದ ಇದನ್ನು ರಾಜಕೀಯವಾಗಿ ತೆಗೆದುಕೊಳ್ಳಬೇಕಾಗಿಲ್ಲ. ವಿರೋಧ ಪಕ್ಷದವರೂ ಕೂಡ ನಮಗೆ ಬಹಳ ಹಿತವಚನವನ್ನು ಹೇಳುತ್ತಿದ್ದಾರೆ. ದೇಶದಲ್ಲಿ ಕಷ್ಟ ಪರಿಸ್ಥಿತಿ ಇಲ್ಲದೆ ಇದ್ದರೆ ನಾವೂ ಕೂಡ ಸುಮ್ಮನೆ ಇರಬಹುದಾಗಿತ್ತು. ಸರ್ಕಾರದವರು ಈಗ ಬುದ್ಧಿವಂತಿಕೆ ಮಾಡಿ ನಾವು ಒಂದೂವರೆ ಕೋಟಿ ರೂಪಾಯಿನಷ್ಟು ಹಣವನ್ನು ತೆರಿಗೆ ವಿಧಿಸಿ ವಸೂಲ್ಮಾಡಿದರೆ ಕೇಂದ್ರ ಸರ್ಕಾರದವರು ಕೂಡ ನಾಲ್ಕೈದು ಕೋಟಿ ರೂಪಾಯಿ ಹಣವನ್ನು ಕೊಟ್ಟರೆ ಒಟ್ಟು ಐದಾರು ಕೋಟಿ ರೂಪಾಯಿಗಳನ್ನು ಪ್ರಜೆಗಳಿಗೆ ಮತ್ತು ರೈತರ ಅಭಿ

(ಶ್ರೀ ಗಾಂಜಿ ವೀರಪ್ಪ)

ವ್ಯಧ್ಯಿಗೆ ಖರ್ಚು ಮಾಡುವುದಕ್ಕೆ ಸಹಾಯವಾಗುತ್ತದೆ ಎನ್ನುವ ಸದುದ್ದೇಶದಿಂದ ಈ ಮಸೂದೆಯನ್ನು ತಂದಿದ್ದಾರೆ. ನಾವು ಒಂದೂವರೆಕೋಟಿ ರೂಪಾಯಿ ತೆರಿಗೆ ವಿಧಿಸುವುದೂ ಬೇಡ, ಕೇಂದ್ರದಿಂದ ಬರುವ ಐದು ಕೋಟಿ ರೂಪಾಯಿಯೂ ಬೇಡ ಎಂದರೆ ನಾವು ಏನು ಮಾಡುವುದಕ್ಕಾಗುತ್ತದೆ? ನಾವು ತೆರಿಗೆಯನ್ನು ವಿಧಿಸಿ ಒಂದೂವರೆ ಕೋಟಿ ರೂಪಾಯಿ ಹಣವನ್ನು ವಸೂಲ್ಮಾಡಿ ಕೇಂದ್ರದಿಂದ ನಾಲ್ಕೈದು ಕೋಟಿ ರೂಪಾಯಿ ಹಣವನ್ನು ಪಡೆದು ಅದನ್ನು ರೈತರ ಉದ್ಧಾರಕ್ಕೋಸ್ಕರ ಖರ್ಚು ಮಾಡಿ ಕಷ್ಟ ಪರಿಸ್ಥಿತಿಯನ್ನು ನೀಗಿಸುವುದಕ್ಕೆ ಪ್ರಯತ್ನ ಮಾಡುವುದನ್ನು ಸಮರ್ಥನೆ ಮಾಡಬೇಕಾಗಿದೆ. ಇಲ್ಲದೆ ಇದ್ದರೆ ನಮ್ಮಲ್ಲ ವಸೂಲು ಮಾಡಬೇಕಾಗಿರುವ ಒಂದೂವರೆ ಕೋಟಿ ರೂಪಾಯಿಯೂ ಬೇಡ, ಕೇಂದ್ರ ಸರ್ಕಾರದವರು ಕೊಡಬಹುದಾದ ನಾಲ್ಕೂವರೆ ಕೋಟಿ ರೂಪಾಯಿಯೂ ಬೇಡ ಎಂದು ಹೇಳುತ್ತಾರೆಯೇ ಎಂಬುದಾಗಿ ನಮ್ಮ ಸ್ನೇಹಿತರನ್ನು ಕೇಳುತ್ತಿದ್ದೇನೆ. ಮಾನ್ಯ ಶ್ರೀ ಮುಕ್ಕಣ್ಣಪ್ಪನವರು ಹೇಳುವಂತೆ ಅಡಳಿತ ವೆಚ್ಚದಲ್ಲಿ ಮಿತವ್ಯಯವನ್ನು ಸಾಧಿಸಬೇಕಾದ್ದು ನಿಜ. ಆದುದರಿಂದ ನಾನು ಸರ್ಕಾರದವರಿಗೆ ಕೊಡುವ ಸಲಹೆ ಏನೆಂದರೆ ಮಿತವ್ಯಯವನ್ನು ಮಾಡಿ ಅದರಿಂದ ಹಣ ಉಳಿತಾಯ ಆದರೆ ಅದನ್ನು ಕೂಡ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಬೇಕು. ಆದರೆ ಮಿತವ್ಯಯ ಮಾಡುವುದರಿಂದಲೇ ತಕ್ಷಣ ನಮಗೆ ಬೇಕಾದಷ್ಟು ಹಣ ಬರುವುದಿಲ್ಲ.

ಇಷ್ಟು ಹೇಳಿ ಸಭೆಯ ಮುಂದೆ ಅರ್ಥ ಸಚಿವರು ತಂದಿರುವ ಸರ್ಚಾರ್ಜ್ ಮಸೂದೆಯನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

3-30 P.M.

†Sri V. S. PATIL (Belgaum–I).—Sir, this is one of the most controversial Bills that have been brought before this House. Sir, the Statement of Objects and Reasons says that "in order to maintain and step up the pace of planned development, it has become urgently necessary to find additional resources." So the main object of this Bill is to find money for the Plan. That appears to be the main reason. If we look to Planning of our State that is now published, for 1955-56, it reveals tremendous things. If we read a dozen pages, it will clearly show how this planning is going on. Some figures, your honour will find, in the Third Plan target is so much...

Mr. SPEAKER.—Sri Patil is in the House and not in the Court. He said 'your honour'. I am following every word carefully.

Sri V. S. PATIL.—That is by force of habit, Sir. Your honour means Hon'ble Speaker. Sir, the whole of this booklet clearly shows that the target fixed for everything has not been achieved in any area by this Government. Why was the target fixed in such a way? No physical target has been achieved and in any year. This will show that either planning was bad or....

Sri RAMAKRISHNA HEGDE (Minister for Finance) —If the Hon'ble Member yields—it is not correct to say that we have not reached in any item. In regard to roads, minor irrigation, in regard to Health and in regard to education, we have over-reached the target. We have spent on some schemes more than three times that was provided in the Plan.

Sri S. SIVAPPA.—But the physical target is not reached.

Sri V. S. PATIL.—What are the achievements? If you make a survey you will find that in no case the target has been reached. Why? Either the planning is bad or the execution of plan is worse? Therefore,

why should we sanction further amounts for such things? You want money only for planning. That is why I should like to say that so far as planning is concerned, it does not deserve a single pie to be sanctioned for this planning at all.

Then, Sir, in this Bill, which is a temporary measure, the surcharge was intended to continue for five years at the rate of approximately five crores of rupees being collected every year. That was the intention of our Hon'ble Minister in charge of this Bill, Mr. Ramakrishna Hegde. Sir, according to my friend who spoke last, the life of the Bill is curtailed to one year and the amount to be charged is also curtailed. It comes to one-fifth of the original estimate of the Hon ble Minister in charge. There is another factor which you have to take into consideration, and that is the prevailing conditions, not only scarcity conditions, but famine conditions. If that is also taken into consideration, the net result of this Bill will be zero. Nothing will be recovered under this Bill. Under these circumstances, the only remedy that is left open to the mover of this Bill is to resign from the Cabinet and get out. There is no other alternative if he has got any sense, any sense for his efforts in bringing this Bill.

Sir, it was in 1962 when such a Bill was brought before this House. It was brought by the Revenue Minister. And, if we refer to his speech as reported on pages 249 and 250 dated 8th December 1962, we can see that it clearly shows that the surcharge was meant only for the period when the revision settlement of the lands was pending. The revision settlement has been passed by this House last year. And the Minister had definitely promised that the surcharge was meant only to make up the loss which was due from the tenants or the occupiers of the lands. When we have passed the Revision Settlement, why again has this Bill been brought? That Hon'ble Minister promised at that time that the surcharge would be continued only for a couple of years on account of the Revision Settlement. The promise I suppose is no farce. Now, in order to avoid the responsibility, an assurance which he gave on the floor of this House, he has thrown this child in the lap of Ramakrishna Hegde. My submission is that the Hon'ble Minister who has given a promise on the floor of this House that surcharge on land will not be expended beyond the life of the Revision Settlement, shou'd see that after the Revision Settlement came into force, there should be no surcharge. This was an assurance given on behalf of the Government and not individually by Mr. Krishnappa. It was an assurance given to this House by one of the Members of the Cabinet, and I should like to know whether the assurance given by one Minister of Cabinet is binding on the whole body of the Cabinet or not. If it is binding, then I should like to submit that the present Bill is a betrayal of the promise given by the Government. So, it deserves to be thrown out.

Sir, this surcharge is a tax on land. The Hon'ble Minister wants to have power to collect money which will be based upon land assessment —how agricultural lands are to be taxed—which has been passed by this House. In contravention of the specific provisions made under the Land

(SRI V. S. PATIL)

Revenue Code, this Bill has been brought here and even on this count, the Bill deserves to be thrown out, because it is against the decisions taken by this House.

Now, Sir, one of the Congress Members, Mr. Hegde, of course the name is the same, said that if the ryot pays one crore, he will get four crores from the Central Government. I do not know. At least so far as the last fifteen or sixteen years is concerned, no ryot has got a single pie from the Government. All the money has either been spent or has gone into the pockets of so many Hegdes and so many Congress members and Sri Ganji Veerappas, etc. It is not with the ryot. I should like to say that it is no use spending money again over the name of these ryots or in the name of planning. We have enough of experience of this bad planning and its worse execution.

†ಶ್ರೀ ಸಿದ್ಧಯ್ಯ ಕಾಶೀಮಠ (ಶಿರಹಟ್ಟಿ).—ಅಧ್ಯಕ್ಷರೇ, ಭೂಕಂದಾಯದ ಮೇಲೆ ಸರ್‌ಧಾರ್ಜ್ ವಿಧಿಸುವಾಗ ಅದನ್ನು ಸಾರ್ವಜನಿಕರ ಅವಗಾಹನೆಗೆ ಕಳುಹಿಸಿ ಅವರ ಅಭಿಪ್ರಾಯವನ್ನು ಪಡೆದು ನಂತರ ಇದನ್ನು ಇಲ್ಲ ತರಬೇಕು ಎನ್ನುವ ತಿದ್ದುಪಡಿಯನ್ನು ಶ್ರೀ ಕೃಷ್ಣಾ ಅವರು ತಂದಿರುವುದನ್ನು ನಾನು ಸ್ವಾಗತಿಸುತ್ತೇನೆ ರೈತರು ಅತಿವೃಷ್ಟಿ, ಅನಾವೃಷ್ಟಿ ಹಾಗೂ ಸಕಾಲದಲ್ಲಿ ಮಳೆಬಾರದೆ ಫಸಲು ಸರಿಯಾಗಿ ಬಾರದೆ ಅವರು ಕಷ್ಟಕ್ಕೆ ಒಳಗಾಗಿರುವಾಗ 100ಕ್ಕೆ 100ರಷ್ಟು ಸರ್‌ಧಾರ್ಜ್ ವಿಧಿಸುವುದು ಬಹಳ ಅನ್ಯಾಯ. ಅದಕ್ಕಾಗಿ ಸರ್ಕಾರದವರು ಇದನ್ನು ರೈತರ ಅವಗಾಹನೆಗೆ ಕಳುಹಿಸಿ ಅವರ ಅಭಿಪ್ರಾಯವನ್ನು ಪಡೆದ ನಂತರ ಈ ಸರ್‌ಧಾರ್ಜನ್ನು ವಿಧಿಸಬೇಕೆಂದು ನಾನು ಹೇಳುತ್ತೇನೆ.

ಮೊನ್ನೆ ಆಹಾರ ಮಂತ್ರಿಗಳು ಆಹಾರದ ವಿಷಯದಲ್ಲಿ ಈ ಸಭೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಾಗ ಈ ದೇಶದಲ್ಲಿ ಸರಿಯಾಗಿ ಮುಂಗಾರು ಮತ್ತು ಹಿಂಗಾರು ಮಳೆಬಾರದೆ ಇರುವುದರಿಂದ ಜನರು ಕಷ್ಟಕ್ಕೆ ಒಳಗಾಗಿದ್ದಾರೆ ಎಂದು ಹೇಳಿದ್ದಾರೆ. ಈ ವರ್ಷ ನಮ್ಮ ರಾಜ್ಯದಲ್ಲಿ ಬೆಳೆ ಆಗಿರುವುದನ್ನು ಆಣೆವಾರು ರೆಕ್ಕೆಹಾಕಿ 4 ಆಣೆಗಿಂತ ಕಡಿಮೆ ಬೆಳೆ ಆಗಿರುವ ಹಳ್ಳಿಗಳ ಸಂಖ್ಯೆ 13,811 ಮತ್ತು 6 ಆಣೆ ಬೆಳೆಯಾಗಿರುವ ಹಳ್ಳಿಗಳ ಸಂಖ್ಯೆ 3,556 ಎಂದು ಹೇಳಿದ್ದಾರೆ. ರಾಜ್ಯದಲ್ಲಿ ಇಂಥಾ ಒಂದು ಕಷ್ಟಪರಿಸ್ಥಿತಿ ಇರುವಾಗ ಸರ್ಕಾರದವರು ನೂರಕ್ಕೆ ನೂರರಷ್ಟು ಭೂಕಂದಾಯದ ಮೇಲೆ ಸರ್‌ಚಾರ್ಜ್ ವಿಧಿಸುತ್ತೇವೆಂದು ಹೇಳಿದರೆ ಹೇಗೆ? ಹಿಂದೆ ಭೂಕಂದಾಯದ ಮೇಲೆ ಸರ್‌ಚಾರ್ಜ್ ವಿಧಿಸುವಾಗ ತುರ್ತುಪರಿಸ್ಥಿತಿಯು ನೆಪವನ್ನು ಹೇಳಿಕೊಂಡು ಅದನ್ನು ವಿಧಿಸಿದರು. ಇವೊತ್ತು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ರೈತರಿಗೆ ಬಾವಿ ಕೆರೆ ಮುಂತಾದ ಕೆಲಸಗಳನ್ನು ಮಾಡಿಸುವುದಕ್ಕೋಸ್ಕರ ಹಣಬೇಕು ಎಂದು ನೆಪವನ್ನು ಹೇಳಿಕೊಂಡು ಸರ್‌ಧಾರ್ಜನ್ನು ವಿಧಿಸುತ್ತಿದ್ದಾರೆ. ಈಗಾಗಲೇ ತುಂಗಭದ್ರಾ ಪ್ರಾಜೆಕ್ಟಿಗೆ ಕೋಟಿಗಟ್ಟಲೆ ಹಣವನ್ನು ಖರ್ಚುಮಾಡಿ ಅದರ ಉಪಯೋಗವನ್ನು ಪಡೆದುಕೊಳ್ಳುವುದಕ್ಕೆ ರೈತರಿಗೆ ಎಷ್ಟರಮಟ್ಟಿಗೆ ಸಹಾಯ ಮಾಡಿದ್ದಾರೆ ಎಂಬುದನ್ನು ನಾವು ತಿಳಿಯಬೇಕಾಗುತ್ತದೆ. ರೈತರಿಗೆ ಹೆಚ್ಚಿನ ಪ್ರಾತಿನಿತ್ಯವನ್ನು ಕೊಡುತ್ತೇವೆ, ಹೆಚ್ಚಿನ ಅನುಕೂಲಗಳನ್ನು ಕಲ್ಪಿಸಿಕೊಡುತ್ತೇವೆ ಎಂದು ಹೇಳಿ ರೈತರ ಮೇಲೆ ಹೆಚ್ಚಿನ ಹೊರೆಯನ್ನು ಹೊರಿಸುತ್ತಾ ಹೋದರೆ ಅದು ಸರಿಯಾಗಿ ಕಾಣುವುದಿಲ್ಲ.

ಈ ಸರ್ಕಾರದ್ದು ನಾವು ಇನ್ನೊಂದು ವಿಷಯವನ್ನು ನೋಡುತ್ತಿದ್ದೇವೆ. ಅದೇನೆಂದರೆ, ಇವೊತ್ತು ದೇಶದಲ್ಲಿ ಅಭಾವ ಪರಿಸ್ಥಿತಿ ಉಂಟಾಗಿದೆ, ಇಂಥಾ ಒಂದು ಸಂದರ್ಭದಲ್ಲಿ ಸರ್ಕಾರದವರು ವಿರೋಧ ಪಕ್ಷದವರನ್ನು ಕರೆದು ಅವರೊಡನೆ ಆಲೋಚನೆಯಾವೊತ್ತಾದರೂ ಸಮಾಲೋಚನೆಯನ್ನು ನಡೆಸಿದ್ದಾರೆಯೇ? ಈಗ ನಮಗೆ ಸ್ವಾತಂತ್ರ್ಯ ಬಂದಿದೆ. ವಿರೋಧ ಪಕ್ಷದವರಾದ ನಮಗೂ ಕೂಡ ಈ ದೇಶದಲ್ಲಿ ಹಕ್ಕುಬಾಧ್ಯತೆ ಇದೆ. ಆಡಳಿತ ಪಕ್ಷದವರು, ವಿರೋಧ ಪಕ್ಷದವರು ಈ ದೇಶದಲ್ಲಿ ಇಲ್ಲ, ಅವರು ದೇಶದ ಹಿತವನ್ನು ನೋಡತಕ್ಕವರಲ್ಲ ಎಂದು ಭಾವನೆ ಮಾಡಿಕೊಂಡಿರುವ ಹಾಗೆ ಕಾಣುತ್ತದೆ. ಇಂಥಾ ಯಾವುದೇ ಸಂದರ್ಭಗಳಲ್ಲಾಗಲೀ ವಿರೋಧ ಪಕ್ಷದವರನ್ನು ಸರ್ಕಾರದವರು ಕರೆದು ಅವರೊಡನೆ ಆಲೋಚನೆ ಮಾಡಿದ್ದರೆ ಇಂಥಾ ಕಲಹಗಳು ಬರುವುದಿಲ್ಲ. ಲೋಕಸಭೆಯಲ್ಲಿ ಕೂಡ ಇಂಥಾ ಸಂದರ್ಭಗಳು ಬಂದಾಗ ದಿವಂಗತ ಪ್ರಧಾನಿ ಲಾಲ್‌ಬಹದ್ದೂರ್

ಶಾಸ್ತ್ರಿಗಳು ವಿರೋಧ ಪಕ್ಷದವರನ್ನು ಕರೆದು ಅವರೊಡನೆ ವಿಚಾರ ವಿನಿಮಯವಾಡಿ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೆ ಕ್ರಮವನ್ನು ಕೈಗೊಳ್ಳುತ್ತಿದ್ದರು. ಅದೇ ರೀತಿ ಇಲ್ಲಿಯೂ ಮಾಡಬೇಕೆಂದು ನಾನು ಸೂಚನೆ ಮಾಡುತ್ತೇನೆ. ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯವರೆಗೂ ಕೂಡ ಯಾವ ಸಮಯದಲ್ಲೂ ವಿರೋಧ ಪಕ್ಷದವರನ್ನು ಕರೆದು ಅವರೊಡನೆ ವಿಚಾರವಿನಿಮಯ ನಡೆಸಿದ್ದಾರೆಯೇ ಎಂದು ನಾನು ಕೇಳುತ್ತೇನೆ. ಕಂಟಕಪ್ರಾಯವಾದ ಸಂಧಿಗ್ಧ ಪರಿಸ್ಥಿತಿಗಳು ಬಂದಾಗ, ದೇಶದಲ್ಲಿ ದುಸ್ಥಿತಿ ಬಂದಾಗ ವಿರೋಧ ಪಕ್ಷದವರಾದ ನಾವೂ ಕೂಡ ಉಪಯುಕ್ತವಾದ ಸಲಹೆಗಳನ್ನು ಮಾಡುತ್ತೇವೆ ಎಂದು ನಾನು ನಿವೇದನೆ ಮಾಡಿಕೊಳ್ಳುತ್ತೇನೆ ಇವೊತ್ತು ದೇಶದಲ್ಲಿ ಸರಿಯಾಗಿ ಮಳೆ ಬೆಳೆ ಆಗದೆ ರೈತರಿಗೆ ತೊಂದರೆ ಉಂಟಾಗಿರುವಾಗ ಇದನ್ನು ಸಾರ್ವಜನಿಕರ ಅವಗಾಹನೆಗೆ ತಂದು ಅವರ ಅಭಿಪ್ರಾಯಗಳನ್ನು ಪಡೆದು ನಂತರ ಈ ಮಸೂದೆಯನ್ನು ಈ ಸಭೆಯಲ್ಲಿ ತರಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಭೂಕಂದಾಯದ ಮೇಲೆ 100ಕ್ಕೆ 100ರಷ್ಟು ಅಧಿಭಾರವನ್ನು, ಕರವನ್ನು ತಾತ್ಕಾಲಿಕವಾಗಿ 5 ವರ್ಷಗಳವರೆಗೂ ರೈತರ ಮೇಲೆ ಹೇರಬೇಕೆಂದು ಒಂದು ಮಸೂದೆಯನ್ನು ಈ ಸಭೆಯಲ್ಲಿ ತಂದಿದ್ದಾರೆ. ಈ ಮಸೂದೆಯನ್ನು ರೈತರು ಹಾಗೂ ಜನತೆಯ ಅಭಿಪ್ರಾಯವನ್ನು ಸಂಗ್ರಹಿಸುವುದಕ್ಕೆ ಕಳುಹಿಸಬೇಕು ಎಂದು ಒಂದು ತಿದ್ದುಪಡಿಯನ್ನು ಶ್ರೀಮಾನ್ ಕೃಷ್ಣಾ ಅವರು ತಂದಿದ್ದಾರೆ. ಈ ತಿದ್ದುಪಡಿಗೆ ಆಳುವ ಪಕ್ಷದ ಅತ್ಯಪ್ಪ ಸದಸ್ಯರ ಬೆಂಬಲವನ್ನು ಆದರೂ ನಾವು ಪಡೆಯುತ್ತೇವೆ ಎಂದು ನಾನು ನಂಬಿದ್ದೇನೆ. ಇಲ್ಲಿ ಶ್ರೀ ಆರ್. ಎಸ್. ಹೆಗ್ಗಡೆಯವರು ಮತ್ತು ಹರಿಹರ ಕ್ಷೇತ್ರದ ಸದಸ್ಯರಾದ ಶ್ರೀಮತಿ ಗಾಂಜಿ ವೀರಪ್ಪನವರು ಅನಿವಾರ್ಯವಾಗಿ ಮಾನ್ಯ ಆರ್ಥಿಕ ಸಚಿವರ ಹಿಂದೆ ಎದ್ದು ನಿಂತುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದರಲ್ಲಿ ರಾಜಕೀಯವಿಲ್ಲ ಚುನಾವಣೆಯ ದೃಷ್ಟಿ ನನಗಂತೂ ಇಲ್ಲ. ಸರ್ಕಾರಕ್ಕೆ ಹಣ ಬೇಕು ಎಂದು ಜನತೆಯ ಮೇಲೆ ಹೊರೆಯನ್ನು ಹಾಕುತ್ತಿದ್ದಾರೆ. ಸೋಷಿಯಲಿಸ್ಟಿಕ್ ಸರ್ಕಾರ ಬಂದರೂ ಕೂಡ ಹಣ ಇಲ್ಲದೆ ವ್ಯವಹಾರವನ್ನು ನಡೆಸುವುದಕ್ಕಾಗುವುದಿಲ್ಲ. ನಮಗೆ ಸ್ವಾತಂತ್ರ್ಯ ಬಂದಮೇಲೆ ಸುಮಾರು 18 ವರ್ಷಗಳಿಂದಲೂ ಸರ್ಕಾರದವರು ನಾನಾ ರೀತಿಯಲ್ಲಿ ಜನಗಳ ಮೇಲೆ ಕರವನ್ನು ಹೇರಿಕೊಂಡು ಬಂದಿದ್ದಾರೆ. ಇದರ ಮೇಲೆ ಇವೊತ್ತು ಬೆಲೆಗಳು ಏರಿವೆ. ಜನತೆಗೆ ಪದಾರ್ಥಗಳನ್ನು ಕೊಂಡುಕೊಳ್ಳುವ ಶಕ್ತಿ ಸಂಪೂರ್ಣವಾಗಿ ಕುಸಿದುಬಿದ್ದು ಹೋಗಿದೆ. ಹಣದ ಉಬ್ಬರ ಜಾಸ್ತಿಯಾಗಿದೆ. ರೂಪಾಯಿನ ಮೌಲ್ಯ 20 ನಯಾ ಪೈಸೆಯಿಂದ 10 ನಯಾ ಪೈಸೆಗಳ ಮಧ್ಯೆ ಓಡಾಡುತ್ತಿದೆ. ನಿಜ, ಸರ್ಕಾರದವರು ಯೋಜನೆಗಳನ್ನು ಕಾರ್ಯಗತಮಾಡುವಾಗ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟಿದ್ದಾರೆ. ಕಷ್ಟದಿಂದ ಜನಗಳು ಕೊಟ್ಟಂತಹ ಕರವನ್ನು ಸರ್ಕಾರದವರು ದುಂದು ವೆಚ್ಚಮಾಡಿದ್ದಾರೆ. ಇವೊತ್ತು ಆ ಯೋಜನೆಗಳು ಫಲವನ್ನು ಕೊಟ್ಟಿಲ್ಲ. ಆದರೆ ಹಣದ ಕೊರತೆ ಬಾಯ್ದೆರೆದು ನುಂಗುವುದಕ್ಕೆ ಹೊರಟಿದೆ. ಈ ಪರಿಸ್ಥಿತಿಯನ್ನು ಅಡಳಿದ ವರ್ಗದವರು ಜಾರಿಗೆ ತಂದು ಇಟ್ಟಿದ್ದಾರೆ. ಆಗ ಈ ಭೂಕಂದಾಯವನ್ನು ಏನೇನೋ ಕಾರಣಗಳಿಂದ ವಿಮರ್ಶೆ ಮಾಡಬೇಕೆಂದು ಹೇಳಿದಾಗ ಹಿಂದೆ ಇದೇ ಮಾನ್ಯ ಸಭೆ ಅಂಗೀಕಾರ ಕೊಟ್ಟಿತ್ತು. ರೀಸರ್ವೆ ಆಗಿಲ್ಲ ಎಂದು ಹಣದ ಕೊರತೆ ಇದೆ ಎಂದು ಹೇಳಿ ಹತ್ತು ರೂಪಾಯಿ ಕಂದಾಯ ಕೊಡುತ್ತಿದ್ದವರನ್ನು 40 ರೂಪಾಯಿ ಕೊಡುವಂತೆ ಹಿಂದೆ ಮಾಡಿದ್ದರು. ಈಗ ಆರು ಕೋಟಿಯಷ್ಟು ಭೂಕಂದಾಯ ಬರುತ್ತಿರುವುದರಮೇಲೆ ಆರು ಕೋಟಿ ರೂಪಾಯಿಗಳಷ್ಟು ಸರ್‌ಚಾರ್ಜನ್ನು ವಿಧಿಸುತ್ತಿದ್ದಾರೆ. ಈ ರೀತಿ ಸರ್‌ಚಾರ್ಜನ್ನು ರೈತರಮೇಲೆ ವಿಧಿಸಿದರೆ ಎಷ್ಟಾಗುತ್ತದೆ ಎನ್ನುವುದನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಆರ್. ಎಸ್. ಹೆಗ್ಗಡೆಯವರು ಹಾಗೂ ಇತರರು ಯೋಚನೆ ಮಾಡಬೇಕು. ಇವೊತ್ತು ಹಾಕಿರತಕ್ಕ ಪರೋಕ್ಷ ತೆರಿಗೆಗಳು ಮಾರಾಟಕರ ತೆರಿಗೆಗಳ ಮೂಲಕ ರೈತನಮೇಲೆ, ಕಾಳನ್ನು ಕೊಂಡ ತಿನ್ನುವವನಮೇಲೆ ಬೀಳುತ್ತದೆ. ಇವೊತ್ತು ರೈತನ ಮನೆಯಲ್ಲಿ ಮೂರು ಕಾಸಿನ ಬಂಡವಾಳ ಕೂಡ ಇಲ್ಲ. ಒಂದನೇ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗಾಗಿ ದೇಶ ಸ್ವಾವಲಂಬನೆ ಸಾಧಿಸುತ್ತದೆ ಎಂದರು. ಅದು ಆಗಲಿಲ್ಲ. ಎರಡನೇ ಪಂಚವಾರ್ಷಿಕ ಯೋಜನೆಯೊಳಗಾಗಿ ಆಹಾರದ ಸ್ವಾವಲಂಬನೆ ಸಾಧಿಸುತ್ತೇವೆ ಎಂದರು, ಅದೂ ಆಗಲಿಲ್ಲ. ಮೂರನೆ ಯೋಜನೆಯಲ್ಲಿ ಇದು ಮುಗಿಯುವ ಹೊತ್ತಿಗೆ ದೇಶದಲ್ಲಿ ಜನಕ್ಕೆ ಈ ವರ್ಷ ಮಳೆಯ ಅಭಾವದಿಂದಾಗಿ ಭೀಕರವಾದ ಬರಗಾಲ ಬಂತು ಮತ್ತು ಸರಕಾರ ಹೊರಡಿಸಿರುವ ಸರ್‌ಕ್ಯುಲರುಗಳಂತೆ ನೋಡುವಾಗ ಸುಮಾರು ಒಂದೂವರೆ ಕೋಟಿ ಟನ್ನುಗಳಷ್ಟು ಆಹಾರದ ಕೊರತೆ ನಮ್ಮ ರಾಜ್ಯಕ್ಕೆ ಇರುವುದರಲ್ಲಿ ಸುಮಾರು ಇಪ್ಪತ್ತು ಲಕ್ಷ ಟನ್ನುಗಳಷ್ಟು ಧಾನ್ಯದ ಕೊರತೆ ಬರುತ್ತದೆ ಎಂದು ಅಂದಾಜಿದೆ. ಅಲ್ಲದೆ ರೈತರಿಗೆ ಹೆಚ್ಚು ಆಹಾರ ಬೆಳೆಯಲು ಬೇಕಾದಷ್ಟು ಬೀಜ, ಗೊಬ್ಬರ ಕೊಡುತ್ತಿದ್ದೇವೆ ಎಂದು ದೊಡ್ಡದಾಗಿ ಡಂಗುರ ಹೊಡೆಯುತ್ತಾ ಬಂದಿದ್ದಾರೆ. ಇದು ಬರೀ ಬಾಯಲ್ಲಿ ಹೇಳುತ್ತಿದ್ದಾರೆಯೇ ಹೊರತು ಕಾರ್ಯತಃ

(ಶ್ರೀ ಎಸ್. ಗೋಪಾಲಗೌಡ)

ಯಾವುದೂ ಆಗಿಲ್ಲ. ಗೊಬ್ಬರ ಸಿಗುತ್ತಿಲ್ಲ. ಹೈಬ್ರೀಡ್ ಜೋಳದ ಬೀಜ ಒಂದು ಕೆ. ಜಿ. ಆರು ರೂಪಾಯಿನಿಂದ ಹತ್ತು ರೂಪಾಯಿಗಳಷ್ಟು ಕೊಡುತ್ತೇವೆಂದರೂ ಈ ಬೀಜ ಸಿಗುವುದಿಲ್ಲ. ಸಾಕಾದಷ್ಟು ಬೀಜವನ್ನು ಮಾಡಲಕ್ಕೆ ಗೊಬ್ಬರವನ್ನು ರೈತರಿಗೆ ಒದಗಿಸಲಕ್ಕೆ ಇನ್ನೂ ಆಗುತ್ತಿಲ್ಲ, ನಿಜಾಂಶವನ್ನು ಈ ವಿಷಯದಲ್ಲಿ ಇಲ್ಲಿ ಹೇಳಿ ಮಾತನಾಡಿದರೆ ಅದೇನೂ ತಪ್ಪು ಎನಿಸುವುದಿಲ್ಲ. ಅಲ್ಲದೆ ಮುಂದೆ ಎರೆಕ್ಷನಿಗೆ ನಿಂತರೆ ಕೆಲವರು ಗೆಲಿಯಬಹುದು ಎಂದು ಇಲ್ಲಿ ಹೇಳಬಹುದು. ಇಂತಹವರು ಹದಿನೆಂಟು ವರ್ಷಗಳಿಂದಲೂ ರಾಜ್ಯದ ಆಡಳಿತವನ್ನು ನಿರ್ವಹಿಸಿ ಇಲ್ಲನ ಸ್ಥಿತಿಗತಿ ಗಳನ್ನು ನೋಡಿದರೆ ಎಂತಹವನ ಕಣ್ಣಲ್ಲಾದರೂ ನೀರು ಬರದೇ ಇರುವುದಿಲ್ಲ. ತುಂಗಭದ್ರಾ ಅಣೆಕಟ್ಟಿಗಾಗಿ ಹಾಗೂ ಇತರ ದೊಡ್ಡ ಅಣೆಕಟ್ಟುಗಳನ್ನು ಕಟ್ಟಿದರೂ ಕೂಡ ಆದರಿಂದ ಒಂದು ನಯಾಪೈಸಾ ಬಡ್ಡಿಯೂ ಕೂಡ ನಮಗೆ ಸಿಗುತ್ತಿಲ್ಲ. ಇಷ್ಟು ನಿರ್ಲಕ್ಷ್ಯದಿಂದ ಆಡಳಿತದಲ್ಲಿ ಕೆಲಸ ನಡೆಯುತ್ತಿದೆ. ರೈತರಿಗೆ ನೀರು, ಬೀಜ, ಎತ್ತು ಸಾಲ ಹೀಗೆ ಪ್ರತಿಯೊಂದನ್ನೂ ಪುಕ್ಕಟೆಯಾಗಿ ಕೊಟ್ಟರೂ ರೈತರು ಹೆಚ್ಚು ಬೆಳೆಯನ್ನು ಬೆಳೆಯುವ ಸ್ಥಿತಿಯಲ್ಲಲ್ಲ. ಹೀಗಿರುವಾಗ ಇದ್ದೇ ರೈತರ ಹೆಸರಿನಲ್ಲಿ ರೈತರಮೇಲೆ ಈ ರೀತಿಯಾದ ಕರಭಾರವನ್ನು ಹೇರುತ್ತಾ ಬರುತ್ತಿದ್ದಾರೆ. ಇದು ಸಾಲದು ಎಂದು ನೀರಾವರಿ ರೆವಿಗಾಗಿ ತಗ್ಗಾದೆ ನೋಟೀಸುಗಳನ್ನು ಕೊಟ್ಟು ಕರವನ್ನು ಕೊಡದೇ ಹೋದರೆ ನೀರು ಕೊಡುವುದಿಲ್ಲ ಎಂದು ಹೇಳುತ್ತಾರೆ. ನಾಲೆಯ ಕೆಳಗೆ ಇರುವ ಜಮೀನಿಗೆ ನೀರನ್ನೇ ಕೊಟ್ಟಿಲ್ಲ. ಹಾಗೆ ನೀರು ಕೊಡದೇ ಇದ್ದರೂ ರೆವಿ ರೇಟನ್ನು ಕೊಡಬೇಕೆಂದು ಹೇಳುವುದು ಸರಿಯೇ? ನಾಲೆಯ ಕಳಗಿರತಕ್ಕ ಅಚ್ಚುಕಟ್ಟನ್ನು ಸರಿಮಾಡಿ ನೀರನ್ನು ಕೊಟ್ಟರೆ ರೆವಿ ಹಾಗೂ ಬೆಟರುಮೆಂಟು ರೇಟುಗಳನ್ನು ಕೊಡಬಹುದು. ತಾವೇನೋ ಈಗ ಅಧಿಕಾರದಲ್ಲಿದ್ದೇವೆ ಈ ಅಧಿಕಾರವನ್ನೇ ಇರುವ ತನಕ ಉಳಿಸಿಕೊಂಡು ಹೋಗಬೇಕು ಎಂದು ಕಾಗಳನ್ನು ಹಾಗೂ ಇತರ ತೆರಿಗೆಗಳನ್ನು ಹಾಕುವುದಾದರೆ ಇದು ಪರಿಣಾಮದಲ್ಲಿ ಕೃಷಿಯ ಉತ್ಪಾದನೆಯನ್ನು ಹೆಚ್ಚು ಮಾಡುವುದಕ್ಕೆ ಬದಲಾಗಿ ಕುಂಠಿತಗೊಳಿಸುತ್ತದೆ. ರೈತನ ಕೊಂಡುಕೊಳ್ಳುವ ಪರಿಸ್ಥಿತಿ ಸರಿ ಯಾಗಿಲ್ಲ. ಈಗಾಗಲೇ ಕೇಂದ್ರದವರು ಬಜೆಟ್ಟನ್ನು ಮಂಡಿಸುತ್ತಾ ಬಟ್ಟೆಯಮೇಲೆ, ಸಿಗರೇಟುಗಳ ಮೇಲೆ ಹಾಗೂ ಇನ್ನಿತರ ಬಾಬುಗಳಮೇಲೆ ತೆರಿಗೆ ಹೊರಿಸಬೇಕೆಂದು ಸುಮಾರು ನೂರೊಂದು ಕೋಟಿಯಷ್ಟು ಹಣವನ್ನು ತೆರಿಗೆಯ ಮೂಲಕ ಪಡೆಯಬೇಕೆಂದು ಹೇಳುತ್ತಿದ್ದಾರೆ. ಇವೆಲ್ಲಾ ರೈತನಮೇಲೆಯೇ ಬೀಳುತ್ತದೆ. ಅವಶ್ಯಕವಾದ ಎಲ್ಲ ವಸ್ತುಗಳ ಮೇಲೆಯೂ ಕರಭಾರವು ಬೀಳು ತ್ತದೆ. ಲಕ್ಸುರಿ ವಸ್ತುಗಳಮೇಲೆ ಹಾಕುತ್ತೇವೆ ಎಂದು ಬಾಯಲ್ಲಿ ಹೇಳುತ್ತಾರೆಯೇ ಏನಾ ನಿತ್ಯದ ಅವಶ್ಯಕತೆಗಳ ವಸ್ತುಗಳಮೇಲೆ ತೆರಿಗೆ ಬಿದ್ದೇ ಬೀಳುತ್ತದೆ. ಈ ಸ್ಥಿತಿ ಇರುವಾಗ ಹಣದ ಉಬ್ಬರ ಹಾಗೂ ಏರುಪೇರುಗಳು ಇರುವಾಗ ಇನ್ನೂ ಹೆಚ್ಚು ತೆರಿಗೆಗಳನ್ನು ಜನರ ಮೇಲೆ ತುಂಬಿ ಕರಭಾರ ವನ್ನು ಹೆಚ್ಚಿಸುತ್ತಿದ್ದಾರೆ. ಇದರಿಂದ ರೈತರಲ್ಲರುವ ಶಕ್ತಿಯನ್ನೆಲ್ಲ ಹಿಂಡಿ ಏನೇನು ಬೇಕೋ ಅದನ್ನೆಲ್ಲಾ ಸರಕಾರದವರು ಮಾಡುತ್ತಿದ್ದಾರೆ. ಈಗ ಜನತೆಗೆ ಅನುಕೂಲ ಮಾಡುತ್ತಿದ್ದೇವೆ ಎಂದು ಇದಕ್ಕಾಗಿ ಈ ಸರ್‌ಚಾರ್ಜನ್ನು ತರುತ್ತಿದ್ದೇವೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಆರ್. ಎಸ್. ಹೆಗ್ಗಡೆಯವರು ಹಾಗೂ ಹರಿಹರ ಕ್ಷೇತ್ರದ ಸದಸ್ಯರು ಮಾತನಾಡುವಾಗ ಹೇಳಿದರು, ಇದರಿಂದ ರೈತರಿಗೆ ಒಟ್ಟು ಕರವನ್ನು ಕೊಡಲು ತೊಂದರೆ ಇಲ್ಲ ಕೊಡಬಹುದು ಎಂದು. ಆದರೆ ಅವರು ಹರಿಹರ ಹಾಗೂ ಕಾರವಾರ ಜನತೆಯಲ್ಲಿ ಹೋಗಿ ಇದನ್ನು ಖುದ್ದಾಗಿ ಚರ್ಚೆ ಮಾಡಿದ್ದರೆ ಆಲ್ಲನ ಸ್ಥಿತಿ ಅವರು ಹೇಳಿದಂತೆ ಇಲ್ಲ ಎನ್ನುವುದು ಗೊತ್ತಾಗುತ್ತಿತ್ತು. ನಾನೂ ಕೂಡ ಅಲ್ಲಿ ಜನರ ಹಾಗೂ ರೈತರನ್ನೆಲ್ಲಾ ವಿಚಾರ ಮಾಡಿ ಬಂದಿದ್ದೇನೆ. ಅಲ್ಲಿಂದ ಬಂದಿರುವ ಕಾಂಗ್ರೆಸ್ ಪಕ್ಷದ ಸದಸ್ಯರುಗಳೊಡನೆಯೂ ವಿಚಾರ ಮಾಡಿದ್ದೇನೆ. ಮತ್ತು ಅಲ್ಲಿರುವ ರೈತರ ಹತ್ತಿರವೂ ಮಾತನಾಡಿ ಬಂದಿದ್ದೇನೆ. ಇದೇನು ಹೊರೆ ವರ್ಷೇ ವರ್ಷೇ ಒಂದಲ್ಲ ಒಂದು ರೀತಿಯಲ್ಲ ಸರಕಾರ ಜನರಮೇಲೆ ಹೊರಿಸುತ್ತಾ ಬಂದಿದೆ, ಇದಕ್ಕಾಗಿ ಹಣವನ್ನು ಎಲ್ಲಿಂದ ತರುವುದು ಎಂದು ಹೇಳುತ್ತಾರೆ. ನಮ್ಮ ಮಾನ್ಯ ಹಣಕಾಸಿನ ಸಚಿವರೇನೋ ಇಲ್ಲಿ ಬಂದು ಅವರು ಏನು ಟಾರ್ಜೆಟ್ಟು ಎಂದು ಇಟ್ಟುಕೊಂಡಿದ್ದರೋ ಅದನ್ನು ಪೂರ್ತಿಯಾಗಿ ಮುಟ್ಟಿದ್ದೇವೆ, ಎಂದರೆ, ಶೇಕಡ ತೊಂಬತ್ತರಿಂದ ತೊಂಬತ್ತೆರಡು ಇಷ್ಟು ಬಂದಿದೆ ಎಂದು ಹೇಳಬಹುದು. ಅವರ ಜಿಲ್ಲೆಯಲ್ಲೇ ಬೇಕಾದರೆ ಅವರು ನೋಡಬಹುದು. ಒಂಬತ್ತು ಕೋಟಿಯಷ್ಟು ಕಲ್‌ಪರ್ಟ್ ರಸ್ತೆಗಳು ಇವುಗಳ ಕೆಲಸಗಳನ್ನು ಮಾಡಬೇಕೆಂದು ಇದ್ದರೂ ಆದರಲ್ಲಿ ಅರ್ಧದಷ್ಟು ಸೇತುವೆಗಳ ಕೆಲಸ ಇನ್ನೂ ಅರ್ಧಮಟ್ಟದಲ್ಲಿಯೇ ನಿಂತಿವೆ. ಹೀಗೆ ಎಷ್ಟೋ ಹಣ ಎರ್ಲೆರ್ಲೋ ಹಾಳಾಗಿ ಹೋಗು ತ್ತಿದೆ. ಎಡನೆ ಯೋಜನೆಯಲ್ಲಿ ಮಾಡಬೇಕಾದ ಅಭಿವೃದ್ಧಿ ಕಾರ್ಯಗಳು ಮೂರನೇ ಯೋಜನೆ ಯಾದರೂ ಇನ್ನೂ ಆಗಲಲ್ಲ. ಇವೊತ್ತು ಬೆಳಗ್ಗೆ ಮಾನ್ಯ ನೀರಾವರಿ ಶಾಖೆಯ ಉಪಮಂತ್ರಿಗಳು

ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ಹೇಳಿದರು; ತುಮಕೂರು ಜಿಲ್ಲೆಯಲ್ಲಿ ಹೊಸ ಕೆಲಸಗಳನ್ನು ಮಾಡಿಸುವುದಕ್ಕಾಗಿ ಸುಮಾರು 19 ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡುತ್ತಿದ್ದೇವೆ ಎಂದು. ಹೊದಲನೇ ಯೋಜನೆಯಲ್ಲಿ ಬೇರೆ ಹೆಸರಿನಲ್ಲಿ ಖರ್ಚು ಮಾಡುತ್ತೇವೆಂದು ಹೇಳಿದರು. ಇಷ್ಟು ಮಾಡಿದರೂ ಜನಕ್ಕೆ ಸರಿಯಾಗಿ ಕಾಳು ಸಿಗುತ್ತಿಲ್ಲ. ಅಲ್ಲದೆ ಅವರು ಹೇಳುವುದು ನಮ್ಮ ವಿರೋಧ ಪಕ್ಷದವರು ಅಡಳಿತದವರೊಂದಿಗೆ ಸಹಕರಿಸುತ್ತಿಲ್ಲ, ಇಲ್ಲವ ಇಕ್ಕಟ್ಟುಗಳನ್ನು ಆತಂಕಗಳನ್ನು ಒಡ್ಡುತ್ತಿದ್ದಾರೆಂದೂ ಹಾಗೂ ಇನ್ನೇನೇನೋ ಕಾರಣಗಳಿಗಾಗಿ ಇದನ್ನು ವಿರೋಧ ಮಾಡುತ್ತಿದ್ದಾರೆ ಎಂದರು. ಆದರೆ ನಮ್ಮ ಸರಕಾರ ಯಾವ ಕಾನೂನು ತಂದರೂ ಅವರಲ್ಲಿ ಕೈ ಎತ್ತುವ ಜನ ಜಾಸ್ತಿಯಾಗಿದ್ದಾರೆ ಎಂದು ಇಲ್ಲಿ ಹೇಳುತ್ತಾ, ಈ ಮಸೂದೆಯನ್ನು ತಂದರೆ ಇದನ್ನು ನೋಡಿಕೊಂಡು ನಾವು ಸಹಿಸುವುದಕ್ಕೆ ಆಗುವುದಿಲ್ಲ. ಇಂತಹ ಕ್ರಮಗಳನ್ನು ತಡೆಗಟ್ಟುವುದಕ್ಕೆ ಏನೇನು ಕ್ರಮ ಗಳನ್ನು ಮಾಡಬೇಕೋ ಅವನ್ನು ನೋಡಿ ಮುಂದೆ ಹೇಗಾದರೂ ಮಾಡಬೇಕಾದೀತು. ಅಂತಹು ದನ್ನು ಮಾಡಬೇಡಿ ಎಂದು ಇಲ್ಲಿ ಹೇಳಿದರೆ ಅದನ್ನು ತಡೆಯುವುದಕ್ಕೆ ಆಗುವುದಿಲ್ಲ. ಅಲ್ಲದೆ ಇದರ ಬಗ್ಗೆ ಮಾತನಾಡುತ್ತ ಕೆಲವರು ಇಲ್ಲಿ ಜೈ ಕಿಸಾನ್, ಜೈ ಜವಾನ್ ಎಂದು ಎಂದುಬಿಟ್ಟರು. ಅವ್ಯಾಹತವಾಗಿ ರೈತರ ಹೆಸರಿನಲ್ಲಿ ಜವಾನರ ಹೆಸರನ್ನು ಮುಂಡು ಮಾಡಿಕೊಂಡು ಬಂದು ಇಲ್ಲಿ ಹೇಳಿದರೆ ರೈತರ ಸ್ಥಿತಿಗತಿಗಳೇನು ಜವಾನರ ಸ್ಥಿತಿಗಳೇನು ಎನುವುದನ್ನು ತಿಳಿದುಕೊಂಡು ಇಲ್ಲಿ ಮಾತನಾಡುತ್ತಿಲ್ಲ. ಅವರು ಮೊದಲನ ಸ್ಥಿತಿಯಲ್ಲಿಲ್ಲ. ಜವಾನರಾಗಿ ಹೋರಾಡುತ್ತಿರುವ ಜವರ ದಾರುಣ ಕಥೆ ಬೇರೆ ಇದೆ. ಬೇಕಾದರೆ ಹೇಳಬಹುದು. ನಾನು ಮಾನ್ಯ ಅರ್ಥ ಸಚಿವರಲ್ಲಿ ಒತ್ತಿ ಹೇಳುವುದು, ಇನ್ನು ಬೇರೆ ಯಾವುದಾದರೂ ತೆರಿಗೆಗಳನ್ನು ಹಾಕಿ, ಇಂತಹ ಬಡ ಜನರಮೇಲೆ ಹೊರೆಯನ್ನು ಹೇರಬೇಡಿ. ಆಹಾರ ಮಂತ್ರಿಗಳಿಗೆ ಕೆಲವು ಕಡೆಗಳಲ್ಲಿ ಹೆಚ್ಚು ಆಹಾರ ಬೆಳೆಯಲು ಅವಕಾಶವಿದೆ ಎಂದು ಅವರ ಗಮನವನ್ನು ಸೆಳೆಯಲು ಹೇಳುತ್ತಿದ್ದರೂ ಅದರ ಕಡೆಗೆ ಗಮನ ಕೊಡದೆ ಇವೊತ್ತು ಅಂತಹ ಭೂಮಿ ಪಾಳು ಬಿದ್ದಿದೆ ಇದಕ್ಕೆ ಸರಿಯಾಗಿ ನೀರಾವರಿ ಸೌಕರ್ಯವನ್ನು ಮಾಡಿ ಎಂದರೂ ಮಾನ್ಯ ಮಂತ್ರಿಮಾತ್ರು ಮಂತ್ರಿಗಳು ಒದಗಿಸಿಕೊಡಲು ಸಹಾಯ ಮಾಡಲಿಲ್ಲ. ಕುಡಿಯುವ ನೀರೇ ಸಿಗದಿರುವಾಗ ಜನ ಸಾಗು ಮಾಡಲು ನೀರಿಲ್ಲದಿದ್ದರೆ ಹೇಗೆ ತಾನೇ ಮಾಡಲು ಸಾಧ್ಯ ? ಹಣ ಬೇಕಾದರೆ ಭ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿ ಮತ್ತು ಇನ್ನೆಲ್ಲಿ ಹಣ ಸಿಗುತ್ತದೆ ಎನ್ನುವ ಸಂಪನ್ಮೂಲಗಳನ್ನು ಬೇಕಾದರೆ ನಾವು ತೋರಿಸುತ್ತೇವೆ. ಅದರಂತೆ ವಸೂಲು ಮಾಡ ಬಹುದು. ಇದನ್ನು ಬಿಟ್ಟು ರೈತರಮೇಲೆ ಹೊರೆಯನ್ನು ಹೊರಿಸುವ ಸಾಹಸವನ್ನು ಮಾಡಬೇಡಿ. ಅವರ ಜೀವನ ತುಂಬಾ ಕಷ್ಟವಾಗಿದೆ. ಅವರಿಗೇ ಬೇಕಾಗುವ ಸವಲತ್ತುಗಳನ್ನು ಕೊಟ್ಟರೆ ಅವರು ಇನ್ನೂ ಹೆಚ್ಚಿಗೆ ದೇಶದಲ್ಲಿ ಉತ್ಪಾದನೆ ಮಾಡಲು ಅವಕಾಶವಾಗುತ್ತದೆ. ತಾವು ತೆರಿಗೆಯ ನೀತಿಯನ್ನು ಖಂಡಿತವಾಗಿ ಬದಲಾಯಿಸಿಕೊಳ್ಳಬೇಕು. ಮಾನ್ಯ ರಾಮಕೃಷ್ಣ ಹೆಗ್ಗಡೆಯವರು ಯುವಕರು, ಅವರಿಗೂ ಸಮಾಜವಾದದ ರೀತಿ ನೀತಿಗಳು ಮತ್ತು ವ್ಯವಸ್ಥೆಗಳು ಚೆನ್ನಾಗಿ ಗೊತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ಎಲ್ಲ ಹೇಗೆ ಕರಗಳನ್ನು ಹಾಕಬೇಕು, ಹೇಗೆ ಸವಲತ್ತುಗಳನ್ನು ಕೊಡಬೇಕು ಎನ್ನುವುದೂ ಗೊತ್ತು. ಹಿಂದೆ ಸರ್‌ಚಾರ್ಜು ಹಾಕಬೇಕೆಂದು ಈ ಸಭೆಯಲ್ಲಿ ಬಂದಾಗ ಇದನ್ನು ಒಂದು ವರ್ಷಕ್ಕೆ ಮಾತ್ರ ಹಾಕುತ್ತೇವೆ ಎಂದರು. ಆಮೇಲೆ ಪುನಃ ಇಲ್ಲಿಗೆ ಬಂದು ಸರ್ವೆ ಕೆಲಸ ಪುನರ್ಪ್ರಮರ್ಶೆಯಾಗಬೇಕಾಗಿದೆ ಇದು ತಡವಾಗಿದೆ ಇದಕ್ಕಾಗಿ ಇನ್ನೂ ಒಂದು ವರ್ಷ ಹಾಕುತ್ತೇವೆ ಮತ್ತು ಇದಕ್ಕಾಗಿ ಹಣ ಬೇಕೆಂದು ಹೇಳಿದರು. ಆದರೆ ಇದು ತಾತ್ಕಾಲಿಕವಾದುದು ಎಂದು ಹೇಳುತ್ತ, ಈಗ ಪುನಃ ಇಲ್ಲಿಗೆ ಬಂದು ಐದು ವರ್ಷಗಳ ಕಾಲಕ್ಕೆ ಪೂರ್ತಿಯಾಗಿ ರೈತರಮೇಲೆ ಹೊರೆಯನ್ನು ಹೇರಬೇಕೆಂದು ಇಲ್ಲಿ ತಂದಿದ್ದಾರೆ. ಇದಕ್ಕೆ ಜನರ ಬೆಂಬಲ ಪಡೆಯಲು ಇದನ್ನು ಜನತೆಗೆ ಕಳುಹಿಸಬೇಕೆಂದು ಇಲ್ಲಿ ತಿದ್ದುಪಡಿ ತಂದು ಆ ವಿಷಯದ ಮೇಲೆ ಚರ್ಚೆ ಮಾಡಿದಾಗ ಇದನ್ನು ಹಾಗೆ ಮಾಡಲು ಯಾವ ಕಾರಣವೂ ಇಲ್ಲ ಎಂದು ಹೇಳಿದರು.

4-00 P.M.

ಇದನ್ನು ನಾವು ವಿಚಾರಮಾಡಬೇಕು. ಸರಕಾರ ಬೊಕ್ಕಸವನ್ನು ತುಂಬಿಕೊಳ್ಳಬೇಕು ನಿಜ, ಆದರೆ ಯಾವ ಮೂಲಕ ಯಾವರೀತಿ ಎಂಬುದು ಮುಖ್ಯವಾದ ಪ್ರಶ್ನೆ. ನಾನು ಒಂದು ಡಿಕ್ಷೆನರಿ ನೋಡಿದೆ, ಅದರಲ್ಲಿ ಸರಛಾರ್ಜ್ ಎಂಬುದಕ್ಕೆ ಅಪವ್ಯಯ ಮಾಡಿರುವ ಹಣವನ್ನು ತುಂಬಿಕೊಳ್ಳಲು ಹಾಕುವ ಹೊಸ ಭಾರದ ತೆರಿಗೆ ಎಂದಿತ್ತು. ಇದು ಸರಿಯಾಗಿ ಖರ್ಚುಮಾಡದೆ ಹಣ ಪೋಲಾಗಿರುವುದನ್ನು ತುಂಬಿಕೊಳ್ಳಲು ಹಾಕಿರುವುದು.

ಅಧ್ಯಕ್ಷರು.—ಪ್ರತಿ ಶಬ್ದಕ್ಕೂ ಅದರಲ್ಲಿ ಎರಡುಮೂರು ಅರ್ಥವಿರುತ್ತದೆ.

Mr. SPEAKER.—Does not the member understand the meaning of the words 'Order, Order'?

ಶ್ರೀ ಕೆ. ಲಕ್ಕಪ್ಪ.—ತಮ್ಮನ್ನು ಅರ್ಥಮಾಡಿಕೊಳ್ಳದೇ ಇದ್ದರೆ ಮತ್ತೆ ಯಾರನ್ನು ಅರ್ಥ ಮಾಡಿಕೊಳ್ಳುವುದು.

Mr. SPEAKER.—The hon'ble member must know that he has to approach me through his Leader and his whip. Let the Leader say that this member does not belong to his Party. He gave me some names and I have given chance to them. I have got only one more name.

ಶ್ರೀ ಕೆ. ಲಕ್ಕಪ್ಪ.—ಪ್ರಜಾಪ್ರಭುತ್ವದಲ್ಲಿ ಈ ರೀತಿಯಿಂದ ವರ್ತನೆ ಮಾಡತಕ್ಕದ್ದು ಸರಿಯಲ್ಲ. ಈ ರೀತಿ ಮಾತನಾಡತಕ್ಕದ್ದು ಮತ್ತು ಸದಸ್ಯರಮೇಲೆ ಕೋಪ ವ್ಯಕ್ತಮಾಡಿದರೆ ನಾನು ಹೆದರುವುದಕ್ಕೆ ಬಂದಿಲ್ಲ. ನಾನು ಅಧಿಕಾರಕ್ಕೇನೂ ಅಂಟಿಕೊಂಡು ಕೂತಿಲ್ಲ.

Mr. SPEAKER.—The Hon'ble member will apologise to the House.

ಶ್ರೀ ಕೆ. ಲಕ್ಕಪ್ಪ.—ನಾನು ಯಾವ ಕಾರಣಕ್ಕಾಗಿ ಅಪಾಲಜಿ ಕೇಳಬೇಕು? ಏನು ತಪ್ಪು ಮಾಡಿದ್ದೇನೆ? ಸಭೆಯ ಗೌರವ ತಿಳಿದಿರಬೇಕು. ಈ ಸಭೆಯಲ್ಲ ನ್ಯಾಯ, ಧರ್ಮ, ನೀತಿ, ಸತ್ಯ ಇಲ್ಲವಿದ್ದರೆ ಯಾವ ರೀತಿ ಸೌಜನ್ಯ ರೀತಿಯಲ್ಲಿ ಭಾಗವಹಿಸಬೇಕು, ಜನಗಳ ಪ್ರತಿನಿಧಿಗಳು ಏತಕ್ಕೋಸ್ಕರ ಸಭೆಯಲ್ಲಿ ಬರಬೇಕೆಂದು ಅರ್ಥವಾಗುತ್ತಿಲ್ಲ. 3 ದಿವಸಗಳಿಂದ ನಡೆಯುತಕ್ಕದ್ದನ್ನು ನೋಡತ್ತಿದ್ದೇನೆ. ಏನು ಹೇಳಿದರೂ ಕೂಡ ಜವಾಬ್ದಾರಿಯುತವಾದ ಉತ್ತರ ಕೊಡುತ್ತಿಲ್ಲ. ನಿಮಗೆ ಅಡ್ಡಿ ಬಂದಿರತಕ್ಕ ನೀತಿಯಮೇಲೆ ಮಾತನಾಡುವುದಕ್ಕೆ ಅವಕಾಶವೇ ಸಿಕ್ಕುತ್ತಿಲ್ಲ. ಯಾರಿಗೆ ಸ್ವಾಮಿ ಕೇಳಬೇಕು? ಜನತಾ ಪ್ರತಿನಿಧಿಗಳು ಯಾವ ರೀತಿ ಕೆಲಸ ಮಾಡಬೇಕು, ನನಗೆ ಅರ್ಥವಾಗುತ್ತಿಲ್ಲ.

Mr. SPEAKER.—Order, order.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ತಮಗೆ ಹೇಳುತ್ತಾ ಇದ್ದೇನೆ.

Mr. SPEAKER.—I called upon the Member to apologise. Far from apologising, he has been making matters worse. I call upon him to retire from the House. I give him 3 minutes time.

ಶ್ರೀ ಕೆ. ಲಕ್ಕಪ್ಪ.—ನಾನು ಸ್ಪೀಕರನ್ನು ಉಲಂಘನೆ ಮಾಡಲಿಲ್ಲ. ಅವರಿಗೆ ಅವಹೇಳನ ಮಾಡತಕ್ಕಂಥ ಮಾತನ್ನು ಹೇಳಲಿಲ್ಲ. ಈ ಸಭೆಯಲ್ಲಿರತಕ್ಕ ಸದಸ್ಯರಿಗೆ ಗೌರವ ಘನತೆ ಇದೆ. ಅವರು ಜನತಾ ಪ್ರತಿನಿಧಿಗಳು. ಜನರು ಚುನಾವಣೆ ಮಾಡಿ ಅವರನ್ನು ಇಲ್ಲಿಗೆ ಕಳಿಸಿದ್ದಾರೆ. ಘೋರವಾದ ಪರಿಣಾಮ ಉಂಟು ಮಾಡುವ ಈ ಬಿಲ್ಲನ್ನು ತರತಕ್ಕ ಸ್ಥಿತಿಯಲ್ಲಿ ನನ್ನ ಸದಸ್ಯತ್ವವನ್ನು ಬಿಟ್ಟು ಹೋಗುವುದಕ್ಕೆ ಸಿದ್ಧನಿದ್ದೇನೆ. ಹೋರಾಟ ನಡೆಸಬೇಕೆಂದು ಪ್ರತಿಜ್ಞೆ ಮಾಡಿದ್ದೇನೆ. ನನ್ನ ಕ್ಷೇತ್ರದಿಂದ ಜನಗಳು ಜೈಲಗ್ಯಾಮ್ ಕಳಿಸಿದ್ದಾರೆ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಲೇಬೇಕು. ಆದ್ದರಿಂದ ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತೇನೆ.

Mr. SPEAKER.—I have requested the Member to retire. I am going to give him 3 minutes time. If he does not retire, I will ask him to be sent out. If he wants he may retire. If he does not want, he is at liberty to act as he likes, but I would only appeal to his Leader and I appeal to every Member in the House. If they so desire, they could advise him to retire from the House.

ಶ್ರೀ ಕೆ. ಲಕ್ಕಪ್ಪ.—ಈ ಪ್ರಜಾಪ್ರಭುತ್ವದಲ್ಲಿ ಮಾತನಾಡುವುದಕ್ಕೆ ಅವಕಾಶವಿಲ್ಲ.

Mr. SPEAKER.—Order, order. The Member has not retired.

Sri V. M. DEO (Gubbi).—He wants to know why and for what he should apologise. He is asking for that information.

Mr. SPEAKER.—I will wait for 5 minutes from now.

ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ಹೇಳಿದರು; ತುಮಕೂರು ಜಿಲ್ಲೆಯಲ್ಲಿ ಹೊಸ ಕೆಲಸಗಳನ್ನು ಮಾಡಿಸುವುದಕ್ಕಾಗಿ ಸುಮಾರು 19 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ ಎಂದು. ಹೊದಲನೇ ಯೋಜನೆಯಲ್ಲಿ ಬೇರೆ ಹೆಸರಿನಲ್ಲಿ ಖರ್ಚು ಮಾಡುತ್ತೇವೆಂದು ಹೇಳಿದರು. ಇಷ್ಟು ಮಾಡಿದರೂ ಜನಕ್ಕೆ ನರಿಯಾಗಿ ಕಾಳು ಸಿಗುತ್ತಿಲ್ಲ. ಆಲ್ಲದೆ ಅವರು ಹೇಳುವುದು ನಮ್ಮ ವಿರೋಧ ಪಕ್ಷದವರು ಅಡಳಿತದವರೊಂದಿಗೆ ಸಹಕರಿಸುತ್ತಿಲ್ಲ, ಇಲ್ಲವ ಇಕ್ಕಟ್ಟುಗಳನ್ನು ಆತಂಕಗಳನ್ನು ಒಡ್ಡುತ್ತಿದ್ದಾರೆಂದೂ ಹಾಗೂ ಇನ್ನೇನೇನೋ ಕಾರಣಗಳಿಗಾಗಿ ಇದನ್ನು ವಿರೋಧ ಮಾಡುತ್ತಿದ್ದಾರೆ ಎಂದರು. ಆದರೆ ನಮ್ಮ ಸರಕಾರ ಯಾವ ಕಾನೂನು ತಂದರೂ ಅವರಲ್ಲಿ ಕೈ ಎತ್ತುವ ಜನ ಜಾಸ್ತಿಯಾಗಿದ್ದಾರೆ ಎಂದು ಇಲ್ಲಿ ಹೇಳುತ್ತಾ, ಈ ಮನಸೂರೆಯನ್ನು ತಂದರೆ ಇದನ್ನು ನೋಡಿಕೊಂಡು ನಾವು ನಹಿಸುವುದಕ್ಕೆ ಆಗುವುದಿಲ್ಲ. ಇಂತಹ ಕ್ರಮಗಳನ್ನು ತಡೆಗಟ್ಟುವುದಕ್ಕೆ ಏನೇನು ಕ್ರಮ ಗಳನ್ನು ಮಾಡಬೇಕೋ ಅವನ್ನು ನೋಡಿ ಮುಂದೆ ಹೇಗಾದರೂ ಮಾಡಬೇಕಾದೀತು. ಅಂತಹು ದನ್ನು ಮಾಡಬೇಡಿ ಎಂದು ಇಲ್ಲಿ ಹೇಳಿದರೆ ಅದನ್ನು ತಡೆಯುವುದಕ್ಕೆ ಆಗುವುದಿಲ್ಲ. ಆಲ್ಲದೆ ಇದರ ಬಗ್ಗೆ ಮಾತನಾಡುತ್ತ, ಕೆಲವರು ಇಲ್ಲಿ ಜೈ ಕಿಸಾನ್, ಜೈ ಜವಾನ್ ಎಂದು ಎಂದುಬಿಟ್ಟರು. ಅವ್ಯಾಹತವಾಗಿ ರೈತರ ಹೆಸರಿನಲ್ಲಿ ಜವಾನರ ಹೆಸರನ್ನು ಮುಂಡು ಮಾಡಿಕೊಂಡು ಬಂದು ಇಲ್ಲಿ ಹೇಳಿದರೆ ರೈತರ ಸ್ಥಿತಿಗತಿಗಳೇನು ಜವಾನರ ಸ್ಥಿತಿಗಳೇನು ಎನುವುದನ್ನು ತಿಳಿಮುಕೊಂಡು ಇಲ್ಲಿ ಮಾತನಾಡುತ್ತಿಲ್ಲ. ಅವರು ಮೊದಲನ ಸ್ಥಿತಿಯಲ್ಲಿಲ್ಲ. ಜವಾನರಾಗಿ ಹೋರಾಡುತ್ತಿರುವ ಜರ ದಾರುಣ ಕಥೆ ಬೇರೆ ಇದೆ. ಬೇಕಾದರೆ ಹೇಳಬಹುದು. ನಾನು ಮಾನ್ಯ ಅರ್ಥ ಸಚಿವರಲ್ಲಿ ಒತ್ತಿ ಹೇಳುವುದು, ಇನ್ನು ಬೇರೆ ಯಾವುದಾದರೂ ತೆರಿಗೆಗಳನ್ನು ಹಾಕಿ, ಇಂತಹ ಬಡ ಜನರಮೇಲೆ ಹೊರೆಯನ್ನು ಹೇರಬೇಡಿ. ಆಹಾರ ಮಂತ್ರಿಗಳಿಗೆ ಕೆಲವು ಕಡೆಗಳಲ್ಲಿ ಹೆಚ್ಚು ಆಹಾರ ಬೆಳೆಯಲು ಅವಕಾಶವಿದೆ ಎಂದು ಅವರ ಗಮನವನ್ನು ಸೆಳೆಯಲು ಹೇಳುತ್ತಿದ್ದರೂ ಅದರ ಕಡೆಗೆ ಗಮನ ಕೊಡದೆ ಇವೊತ್ತು ಅಂತಹ ಭೂಮಿ ಪಾಳು ಬಿದ್ದಿದೆ ಇದಕ್ಕೆ ನರಿಯಾಗಿ ನೀರಾವರಿ ಸೌಕರ್ಯವನ್ನು ಮಾಡಿ ಎಂದರೂ ಮಾನ್ಯ ಮಂತ್ರಿಮಾತ್ರು ಮಂತ್ರಿಗಳು ಒದಗಿಸಿಕೊಡಲು ಸಹಾಯ ಮಾಡಲಲ್ಲ. ಕುಡಿಯುವ ನೀರೇ ಸಿಗದಿರುವಾಗ ಜನ ಸಾಗು ಮಾಡಲು ನೀರಿಲ್ಲದಿದ್ದರೆ ಹೇಗೆ ತಾನೇ ಮಾಡಲು ಸಾಧ್ಯ ? ಹಣ ಬೇಕಾದರೆ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿ ಮತ್ತು ಇನ್ನೆಲ್ಲಿ ಹಣ ಸಿಗುತ್ತದೆ ಎನ್ನುವ ನಂಪನ್ಮೂಲಗಳನ್ನು ಬೇಕಾದರೆ ನಾವು ತೋರಿಸುತ್ತೇವೆ. ಅದರಂತೆ ವಸೂಲು ಮಾಡ ಬಹುದು. ಇದನ್ನು ಬಿಟ್ಟು ರೈತರಮೇಲೆ ಹೊರೆಯನ್ನು ಹೊರಿಸುವ ಸಾಹಸವನ್ನು ಮಾಡಬೇಡಿ. ಅವರ ಜೀವನ ತುಂಬಾ ಕಷ್ಟವಾಗಿದೆ. ಅವರಿಗೇ ಬೇಕಾಗುವ ಸವಲತ್ತುಗಳನ್ನು ಕೊಟ್ಟರೆ ಅವರು ಇನ್ನೂ ಹೆಚ್ಚಿಗೆ ದೇಶದಲ್ಲಿ ಉತ್ಪಾದನೆ ಮಾಡಲು ಅವಕಾಶವಾಗುತ್ತದೆ. ತಾವು ತೆರಿಗೆಯ ನೀತಿಯನ್ನು ಖಂಡಿತವಾಗಿ ಬದಲಾಯಿಸಿಕೊಳ್ಳಬೇಕು. ಮಾನ್ಯ ರಾಮಕೃಷ್ಣ ಹೆಗ್ಡೆಯವರು ಯುವಕರು, ಅವರಿಗೂ ಸಮಾಜವಾದದ ರೀತಿ ನೀತಿಗಳು ಮತ್ತು ವ್ಯವಸ್ಥೆಗಳು ಚೆನ್ನಾಗಿ ಗೊತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ಎಲ್ಲಿ ಹೇಗೆ ಕರಗಳನ್ನು ಹಾಕಬೇಕು, ಹೇಗೆ ಸವಲತ್ತುಗಳನ್ನು ಕೊಡಬೇಕು ಎನ್ನುವುದೂ ಗೊತ್ತು. ಹಿಂದೆ ಸರ್‌ಚಾರ್ಜು ಹಾಕಬೇಕೆಂದು ಈ ನಭೆಯಲ್ಲಿ ಬಂದಾಗ ಇದನ್ನು ಒಂದು ವರ್ಷಕ್ಕೆ ಮಾತ್ರ ಹಾಕುತ್ತೇವೆ ಎಂದರು. ಆಮೇಲೆ ಪುನಃ ಇಲ್ಲಿಗೆ ಬಂದು ಸರ್ವೆ ಕೆಲಸ ಪುನರ್ಪರಿಶೀಲನೆಯಾಗಬೇಕಾಗಿದೆ ಇದು ತಡವಾಗಿದೆ ಇದಕ್ಕಾಗಿ ಇನ್ನೂ ಒಂದು ವರ್ಷ ಹಾಕುತ್ತೇವೆ ಮತ್ತು ಇದಕ್ಕಾಗಿ ಹಣ ಬೇಕೆಂದು ಹೇಳಿದರು. ಆದರೆ ಇದು ತಾತ್ಕಾಲಿಕವಾದುದು ಎಂದು ಹೇಳುತ್ತ, ಈಗ ಪುನಃ ಇಲ್ಲಿಗೆ ಬಂದು ಐದು ವರ್ಷಗಳ ಕಾಲಕ್ಕೆ ಪೂರ್ತಿಯಾಗಿ ರೈತರಮೇಲೆ ಹೊರೆಯನ್ನು ಹೇರಬೇಕೆಂದು ಇಲ್ಲಿ ತಂದಿದ್ದಾರೆ. ಇದಕ್ಕೆ ಜನರ ಬೆಂಬಲ ಪಡೆಯಲು ಇದನ್ನು ಜನತೆಗೆ ಕಳುಹಿಸಬೇಕೆಂದು ಇಲ್ಲಿ ತಿದ್ದುಪಡಿ ತಂದು ಆ ವಿಷಯದ ಮೇರೆ ಚರ್ಚೆ ಮಾಡಿದಾಗ ಇದನ್ನು ಹಾಗೆ ಮಾಡಲು ಯಾವ ಕಾರಣವೂ ಇಲ್ಲ ಎಂದು ಹೇಳಿದರು.

4-00 P.M.

ಇದನ್ನು ನಾವು ವಿಚಾರಮಾಡಬೇಕು. ಸರಕಾರ ಬೊಕ್ಕಸವನ್ನು ತುಂಬಿಕೊಳ್ಳಬೇಕು ನಿಜ, ಆದರೆ ಯಾವ ಮೂಲಕ ಯಾವರೀತಿ ಎಂಬುದು ಮುಖ್ಯವಾದ ಪ್ರಶ್ನೆ. ನಾನು ಒಂದು ಡಿಕ್ಷೆನರಿ ನೋಡಿದೆ, ಅದರಲ್ಲಿ ಸರಛಾರ್ಜ್ ಎಂಬುದಕ್ಕೆ ಅಪವ್ಯಯ ಮಾಡಿರುವ ಹಣವನ್ನು ತುಂಬಿಕೊಳ್ಳಲು ಹಾಕುವ ಹೊಸ ಭಾರದ ತೆರಿಗೆ ಎಂದಿತ್ತು. ಇದು ನರಿಯಾಗಿ ಖರ್ಚುಮಾಡದೆ ಹಣ ಪೋಲಾಗಿರುವುದನ್ನು ತುಂಬಿಕೊಳ್ಳಲು ಹಾಕಿರುವುದು.

ಅಧ್ಯಕ್ಷರು.—ಪ್ರತಿ ಶಬ್ದಕ್ಕೂ ಅದರಲ್ಲಿ ಎರಡುಮೂರು ಅರ್ಥವಿರುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಅದು ನಿಜ. ಅಪವ್ಯಯವನ್ನು ಪೂರ್ತಿಕೆಮಾಡಿಕೊಳ್ಳುವುದಕ್ಕೆ ರೈತರಮೇಲೆ ಬಡ ಬೋರೆಗೌಡನಮೇಲೆ ಹಾಕಿರುವ ಅಧಿಭಾರವಿದು. ರೈತ ದೇಶದ ಬೆನ್ನುಮೂಳೆ ಎಂದು ಹೇಳಿ ಅವನ ಬೆನ್ನುಮೂಳೆಯನ್ನು ತುಂಡುಮಾಡಿದ್ದೀರಿ. ಈಗಾಗಲೇ ಅವನಿಗೆ ಏಪರೀತ ಹೊರೆ ಇರುವಾಗ ಇನ್ನೂ ಒಂದು ಅಧಿಭಾರ ಹಾಕಿದರೆ ಅದು ಅಮಾನುಷ ಕಾರ್ಯವಾಗುತ್ತದೆ. ಇದನ್ನು ದೇಶದ ಜನತೆ ತೀವ್ರವಾಗಿ ಪ್ರತಿಭಟಿಸಬೇಕಾಗುತ್ತದೆ, ವಿರೋಧಿಸಬೇಕಾಗುತ್ತದೆ. ಈ ತೆರಿಗೆಯನ್ನು ಸರಕಾರ ಹಾಕದಂತೆ ನಾವು ಪ್ರತಿಬಂಧಕವನ್ನೊಡ್ಡಬೇಕಾಗುತ್ತದೆ. ಆ ದೃಷ್ಟಿಯಿಂದ ನಾನು ಸರಕಾರದಲ್ಲಿ ಮನವಿಮಾಡಿಕೊಳ್ಳುತ್ತೇನೆ, ತಾವು ಇದನ್ನು ಸರ್ಕ್ಯುಲೇಷನ್ನಿಗೆ ಕಳಿಸಿ, ಮಾನ್ಯ ಆರ್ಥಿಕ ಸಚಿವರು ಪ್ರಚಾರಕ್ಕೆ ಹೋಗಲಿ, ನಾನು ಬೇಕಾದರೆ ಪ್ರಚಾರಮಾಡಲು ಏರ್ಪಡಿಸುವ ಸಭೆಗೆ ಬರುತ್ತೇನೆ. ಅದಕ್ಕೆ ಆರ್. ಎಸ್. ಹೆಗ್ಗಡೆಯವರೂ ಬರಲಿ, ಅಲ್ಲಿ ಒಂದು ನಿರ್ಣಯ ಮಾಡೋಣ. ಈ ವಿಚಾರ ಸಭೆಯುಮುಂದಿಡೋಣ. ಸಭಿಕರು ಈ ತೆರಿಗೆ ಹಾಕಿರುವುದು ಸರಿಯಾಗಿದೆ, ರಾಜ್ಯದ ಆರ್ಥಿಕ ಮುಗ್ಗಟ್ಟನ್ನು ಹೋಗರಾಡಿಸಲು ಇದಕ್ಕೆ ಬೆಂಬಲಕೊಡುತ್ತೇವೆ ಎಂದೇನಾದರೂ ಹೇಳುವುದಾದರೆ ನಾನೂ ಕೂಡ ಈ ತೆರಿಗೆ ಹಾಕಬಹುದೆಂದು ಹೇಳಿಕೆ ಕೊಡುತ್ತೇನೆ. ಮಾನ್ಯ ಕಾಂಗ್ರೆಸ್ ಸದಸ್ಯರೂ ಕೂಡ ದೇಶದಲ್ಲಿ ಸಂಚಾರಮಾಡಿ ಜನರನ್ನು ಎದುರಿಸಿ ಇನ್ನೂ ಹೆಚ್ಚು ಭಾರ ಹಾಕಲಿ. ಪುನರ್ವಿಮರ್ಶೆಯಾಗಿರುವ ಭೂಕಂದಾಯದಮೇಲೆ ಇನ್ನು 30 ವರ್ಷ ಏನು ಭಾರವೂ ಹೇರಬಾರದು ಎಂದಿರುವಾಗ ಕೃಷಿ ಆದಾಯದಮೇಲೆ ನೇರವಾಗಿ ಆದಾಯದ ಕೆರೆ ತೆಗೆದುಕೊಳ್ಳಲು ಅವಕಾಶವಿರುವಾಗ ಅಗ್ರಿಕಲ್ಚರ್ ಇನ್‌ಕಂಟ್ಯಾಕ್ಸ್ ಬೇಕಾದರೆ ವಿಧಿಸಬಹುದು. ಆದರೆ ಭೂಕಂದಾಯ ಹಾಕುವ ಹಳೇ ಪದ್ಧತಿಯನ್ನು ಇನ್ನೂ ಮುಂದುವರೆಸುವುದೇ ಅನುಚಿತವಾಗಿರುವಾಗ ಮತ್ತೆ ಅದರಮೇಲೆ ಭಾರ ಹೇರುವುದು ಸೂಕ್ತವಲ್ಲ. ಆದುದರಿಂದ ಜನಾಭಿಪ್ರಾಯವನ್ನು ಸಂಗ್ರಹಿಸಿ ನಂತರ ಈ ಮಸೂದೆ ಚರ್ಚೆಗೆ ತೆಗೆದುಕೊಳ್ಳುವುದು ಸೂಕ್ತ ಎಂಬುದು ನನ್ನ ಖಚಿತವಾದ ಅಭಿಪ್ರಾಯ. ಮಾನ್ಯ ಸರಕಾರದವರು ತಮ್ಮ ವೈಯಕ್ತಿಕ ಘನತೆ ಗೌರವಗಳನ್ನು ಮುಂದೊಡ್ಡಿ ಏನಾಕಾರಣ ವಿರೋಧಪಕ್ಷದವರು ಏನೋ ರಾಜಕೀಯಮಾಡುತ್ತಿದ್ದಾರೆಂದು ಆಪಾದನೆ ಅವರಮೇಲೆ ಹೊರಿಸಿ ಆ ದೃಷ್ಟಿಯಿಂದ ಈ ತೆರಿಗೆ ಹಾಕಬಾರದು, ಈ ಮಸೂದೆಯನ್ನು ಜನಾಭಿಪ್ರಾಯಕ್ಕೆ ಕಳಿಸಿ ಅವರ ನಲಹೆ ಪಡೆಯಲು ಎಲ್ಲರೂ ಬೆಂಬಲ ಕೊಡುತ್ತೇವೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ಮರುಳಪ್ಪ (ಕಡೂರು).—ಮಾನ್ಯ ಅಧ್ಯಕ್ಷರೇ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮೊದಲು ತಮ್ಮನ್ನು ಅಭಿನಂದಿಸುತ್ತೇನೆ. ಮೈಸೂರು ದೇಶದ ಜನತೆ ಕಷ್ಟವನ್ನನುಭವಿಸಿದ್ದರೂ ಕೂಡ ಕೆಲವು ವಿಷಯಗಳಲ್ಲಿ ಜಾಣರು, ಯಾರು ಈ ಸಭೆಯುಮುಂದೆ ಈ ಮಸೂದೆಯನ್ನು ಮಂಡಿಸಿದ್ದಾರೋ ಅವರಿಗೆ ಒಂದು ಜೈಟರ್ ಕೊಟ್ಟಿದ್ದಾರೆ.

ಅಧ್ಯಕ್ಷರು.—ಅದನ್ನೆಲ್ಲಾ ಇಲ್ಲಿ ಹೇಳುವುದು ಬೇಡ.

ಶ್ರೀ ಜಿ. ಮರುಳಪ್ಪ.—ಆಗಬಹುದು ಸ್ವಾಮಿ. ಈ ಮಸೂದೆಯನ್ನು ಮಂಡಿಸಿರುವ ಸಚಿವರೇ ಹಿಂದೆ ಈ ಸಭೆಯಲ್ಲಿ ಪಂಚಾಯಿತಿ ರಾಜ್ಯದ ಮಸೂದೆಯನ್ನು ಮಂಡಿಸಿದರು. ಅದರ ಪರಿಣಾಮವೇನಾಗಿದೆಯೆಂಬುದು ಈ ಸಭೆಗೂ ಮತ್ತು ಜನರಿಗೂ ಗೊತ್ತಿದೆ. ಅದರಿಂದ ಎಷ್ಟರ ಮಟ್ಟಿಗೆ ಮುಂದಾಲೋಚನೆಯಿಂದ ಇವುಗಳನ್ನು ತರುತ್ತಾರೆಂಬುದ ವ್ಯಕ್ತವಾಗುತ್ತದೆ. ಅವರ ಪಕ್ಷದಲ್ಲಿ ಕೂಡ ಇದಕ್ಕೆ ಎಷ್ಟು ಬೆಂಬಲವಿದೆ ಎಂಬುದನ್ನು ನಹ ನೋಡದೆ ತರುತ್ತಿದ್ದಾರೆ. ಆದುದರಿಂದ ಇದರ ಪರಿಣಾಮವೇನಾಗುತ್ತದೆಂಬುದನ್ನು ನೋಡೋಣ. ಇದುವರೆಗೆ ಮಾತನಾಡಿದ ಸದಸ್ಯರು ಈ ಮಸೂದೆಯನ್ನು ಜನಾಭಿಪ್ರಾಯಕ್ಕೆ ಕಳಿಸಿ ಅದನ್ನು ಪಡೆದು ಈ ಸಭೆಯುಮುಂದೆ ತರಬೇಕೆಂದು ಹೇಳಿದರು. ಯಾವಾಗಲೂ ಕೂಡ ಹಣಕಾಸಿನ ಮಸೂದೆಯನ್ನು ಜನಾಭಿಪ್ರಾಯ ಪಡೆಯಲು ಕಳುಹಿಸುವುದು ಎಲ್ಲೂ ವಾಡಿಕೆಯಾಗಿಲ್ಲ ಎಂದು ಮಂತ್ರಿಗಳು ಹೇಳಿದರು. ನಾವೆಲ್ಲರೂ ಇದನ್ನು ವಿರೋಧಿಸುತ್ತಿದ್ದೇವೆ, ಹಾಗಿರುವಾಗ ಜನಾಭಿಪ್ರಾಯ ಕೇಳಿದ್ದರೆ ಏನೂ ಪ್ರಮಾದವಾಗುತ್ತಿರಲಿಲ್ಲ. ಇದರಿಂದ ಬರುವ ಹಣ ದೇಶದ ಅಭಿವೃದ್ಧಿಗೆ ಬೇಕು, ಅದರಲ್ಲೂ ಸೇಕಡ 80 ಮಂದಿ ರೈತರ ಅಭಿವೃದ್ಧಿಗೆ ಬೇಕು. ಹಾಗಿರುವಾಗ ಬಹುಸಂಖ್ಯೆಯಲ್ಲಿರುವ ರೈತಾಪಿ ಜನರ ಅಭಿಪ್ರಾಯ ಪಡೆದಿದ್ದರೆ ಚೆನ್ನಾಗಿತ್ತು. 18 ವರ್ಷಗಳಿಂದ ಸರಕಾರ ಮಾಡಿರುವ ಅಭಿವೃದ್ಧಿಕಾರ್ಯಗಳ ಪಟ್ಟಿ ಇದೆ, ಇನ್ನೂ ಹೆಚ್ಚು ಅಭಿವೃದ್ಧಿ ಮಾಡುತ್ತೇವೆ, ನೀವು ಒಪ್ಪಬೇಕು ಎಂದು ಜನರ ಮುಂದೆ ಇದನ್ನಿಟ್ಟು ಅವರ ಒಪ್ಪಿಗೆ ಪಡೆಯುವುದರಲ್ಲಿ ತೊಂದರೆಯೇನೂ ಇಲ್ಲ. ಜನರು ಇದನ್ನು ಒಪ್ಪುವುದಾದರೆ ನಾವು ನಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡುವುದು ಮಾತ್ರವಲ್ಲದೆ ಮುಂದಿನ ಚುನಾವಣೆಗೆ ಸಹ ನಿಲ್ಲುವುದಿಲ್ಲ. ತಾವು ಜನ ಪ್ರಿಯರು, ಜನಾನುರಾಗಿಗಳು, ತಮಗೆ ಜನತೆಯ ಬೆಂಬಲವಿದೆ, ಆದುದರಿಂದ ಇದನ್ನು ತರಲು ತಮಗೆ ಹಕ್ಕಿದೆ ಎಂದು ಆಡಳಿತ ಪಕ್ಷದವರು ಹೇಳುತ್ತಾರೆ. ಆದರೆ ಅವರ ಪಕ್ಷದಲ್ಲಿ ಒಬ್ಬಿಬ್ಬರನ್ನು ಬಿಟ್ಟರೆ ನಿಜವಾಗಿಯೂ ಕೂಡ ಯಾರು ರೈತರ ಹಿತವನ್ನು ಸಾಧಿಸುತ್ತಿದ್ದಾರೆ ಎಂಬುದನ್ನು ನೋಡಬಹುದು.

ಚುನಾವಣಾ ಕಾಲದಲ್ಲಿ ಪ್ರವಾಸಮಾಡುವಾಗ ಕೊಟ್ಟ ಭರವಸೆಯಂತೆ ನಡೆದುಕೊಳ್ಳುತ್ತಿರುವರೇ ಎಂಬುದನ್ನು ಅವರು ಗಮನಿಸಿ ತಮ್ಮ ಆತ್ಮ ಶೋಧನೆ ಮಾಡಿಕೊಳ್ಳಬೇಕು. ರೈತರನ್ನು ಕೊಲೆ ಮಾಡುವ ಇಂಥ ತೆರಿಗೆ ಮಸೂದೆಗಳನ್ನು ತಂದು ಅವರೆಷ್ಟು ಪುಣ್ಯ ಕಟ್ಟಿಕೊಳ್ಳುತ್ತಾರೊ ನಾನು ಬೇರೆ ಕಾಣೆ. ಇದು ನ್ಯಾಯವೇ ಎಂಬುದನ್ನು ಅವರು ವಿಮರ್ಶೆಮಾಡಿ ನೋಡಬಹುದು. ಈ ಬಿಲ್ಲನ್ನು ಈಗತರುವುದರಲ್ಲಿ ಒಂದು ಚತುರತೆ ಇದೆ. ಏನು ಚತುರತೆ ಎಂದು ಕೇಳಬಹುದು. ಕೆಲವು ದಿವಸಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ನಾನು ರಿಟೈರಾಗಿಬಿಟ್ಟು ತರುಣರಿಗೆ ಅಧಿಕಾರಕೊಟ್ಟುಬಿಡುತ್ತೇನೆಂದು.

Mr. SPEAKER.—How is all that relevant? I will try to give chance to some other members.

ಶ್ರೀ ಜಿ. ಮರುಳಪ್ಪ.—ಬೇಡ ಎಂದರೆ ಬಿಟ್ಟುಬಿಡುತ್ತೇನೆ. ಚುನಾವಣೆ ಹತ್ತಿರ ಬಂತು. ಈಗ ಇರತಕ್ಕಂಥ ಶ್ರೀ ನಿಜಲಿಂಗಪ್ಪನವರ ಮುಖಂಡತ್ವದಲ್ಲಿ ಈ ಬಿಲ್ಲನ್ನು ಪಾಸ್ ಮಾಡಿದರೂ ಸಹ ಈ ಹಣ ಬರುವುದು ಮುಂದಿನ ವರ್ಷಕ್ಕೆ. ಆಗ ಖರ್ಚು ಮಾಡುವುದಕ್ಕೆ ಹಣ ಬೇಕು. ಮತ್ತೆ ಆಗ ನಾವೇ ಅಧಿಕಾರಕ್ಕೆ ಬರುತ್ತೇವೆಂದು ರೆಕ್ಕ ಹಾಕಿರುವ ಹಾಗೆ ಕಾಣುತ್ತದೆ. ಈಗ ಅವರ ಪಾರ್ಟಿಯಲ್ಲಿ ಎಲ್ಲರೂ ಸಹ ಒಪ್ಪುವುದಿಲ್ಲವೆಂಬುದು ಅವರಿಗೆ ಗೊತ್ತು. ಈಗ ಟಿಕೆಟ್ಟು ಸಿಕ್ಕಬೇಕು. ಆದ್ದರಿಂದ ಬಡ ರೈತನಿಗೆ ಎಷ್ಟೇ ಕಷ್ಟವಾಗಲೀ, ದೇಶಕ್ಕೆ ಎಷ್ಟೇ ಕಷ್ಟವಾಗಲೀ, ತಾವು ಮಾತ್ರ ಸುಖ ಪಡಬೇಕೆಂಬ ಭ್ರಾಂತಿಯಿಂದ ಎಲ್ಲರೂ ಒಪ್ಪಿಗೆ ಕೊಡುತ್ತಿದ್ದಾರೆ. ಇದು ಯಾವ ಧರ್ಮ ನ್ಯಾಯ? ನಾವು ನಿಜವಾಗಿ ಈ ದೇಶದ ಪ್ರತಿನಿಧಿಗಳು, ನಾವು ನಿಜವಾಗಿ ರೈತರ ಪ್ರತಿನಿಧಿಗಳು. ಅವರನ್ನು ಪ್ರತಿಬಿಂಬಿಸುತ್ತಿದ್ದೇವೆಂದು ಇವರು ಹೇಳುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಇದು ಜನತೆಗೆ ಬಾಧೆ ಕೊಡತಕ್ಕಂಥ ವಿಷಯ. ಇವರಿಗೆ ಧೈರ್ಯವಿದ್ದರೆ ಹೇಳುತ್ತೇನೆ. ಎಲೆಕ್ಷನ್ ಮ್ಯಾನಿಫೆಸ್ಟೋದಲ್ಲಿ ಹಾಕಿರುವಂತೆ ನಡೆದುಕೊಳ್ಳಲಿ. ಈ ಮಸೂದೆಯನ್ನು ಜನರ ಮುಂದೆ ಇಟ್ಟು ಅವರು ಅದಕ್ಕೆ ಒಪ್ಪಿದರೆ ನಾವು ನಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡುವುದಕ್ಕೂ, ಮತ್ತು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸದಿರುವುದಕ್ಕೂ ಸಿದ್ಧವಾಗಿದ್ದೇವೆ. 100 ಪರ್ಸೆಂಟ್ ಟ್ಯಾಕ್ಸ್ ಇರುವುದನ್ನು 33 ಪರ್‌ಸೆಂಟಿಗೆ ಇಳಿಸುತ್ತೇವೆಂದು ಶ್ರೀಮಾನ್ ಗಾಂಜೀವೀರಪ್ಪನವರು ಅವರ ಕ್ಷೇತ್ರದಲ್ಲಿ ಹೇಳಿಕೊಳ್ಳಲಿ, ನಾವು ಮಾತ್ರ ಪ್ರಚಾರ ಮಾಡುವುದು ಬೇಡ.

Mr. SPEAKER.—All the time that is given should be profitably used.

ಶ್ರೀ ಜಿ. ಮರುಳಪ್ಪ.—ಸ್ವಾತಂತ್ರ್ಯ ಬರುವುದಕ್ಕೆ ಮೊದಲು ನಾವು ಎಷ್ಟು ನ್ಯಾಯವಾಗಿದ್ದೇವೆ, ಎಷ್ಟು ನಿಷ್ಠೆಯಿಂದ ಇದ್ದೇವೆ. ಸ್ವಾತಂತ್ರ್ಯ ಬಂದು ಕಾಂಗ್ರೆಸ್ಸಿಗೆ ರಾಜ್ಯ ಸಿಕ್ಕಿದರೆ ಮಹಾತ್ಮಗಾಂಧಿಯವರು ಹೇಳಿದಂತೆ ಸರಳ ಜೀವನ ನಡೆಸುತ್ತೇವೆ. ಪರ್ಣಶಾಲೆಯಲ್ಲಿ ವಾಸಮಾಡುತ್ತೇವೆಂದು ಹೇಳುತ್ತಿದ್ದರು. ಆದರೆ ಇವರು ಪರ್ಣಶಾಲೆಯಲ್ಲಿ ವಾಸ ಮಾಡುತ್ತಿಲ್ಲ. ರೈತರುಗಳು ಪರ್ಣಶಾಲೆಯಲ್ಲಿ ವಾಸಮಾಡುತ್ತಿದ್ದಾರೆ. ಇವರ ಕೈಯಲ್ಲಿ ಅಧಿಕಾರ ಬಂದು 18 ವರ್ಷವಾದರೂ ಕೋಟಿಗಟ್ಟಲೆ ಹಣ ಖರ್ಚುಮಾಡುವ ಅಧಿಕಾರ ಸಿಕ್ಕಿ ಎಷ್ಟು ಮಟ್ಟಿಗೆ ವ್ಯಯ ಮಾಡಿದ್ದಾರೆ, ದೇಶದಲ್ಲಿ—ಎಂಥ ಸರಳ ಜೀವನ ನಡೆಸುತ್ತಿದ್ದಾರೆ ಎನ್ನತಕ್ಕಂಥದನ್ನು ಅವರ ಮನಸ್ಸಿಗೆ ಅವರೇ ಪ್ರಶ್ನೆ ಹಾಕಿಕೊಳ್ಳಬಹುದು. ಇವರಿಗೆ ಭಯ ಏತಕ್ಕೆ. ಜನಾನುರಾಗಿಗಳು, ಜನಗಳ ಬೆಂಬಲ ಗಳಿಸಿರತಕ್ಕಂಥವರು, ಪ್ರಜಾಭಿಪ್ರಾಯವನ್ನು ಅವರು ತೆಗೆದುಕೊಳ್ಳಲಿ, ಮತ್ತು ಹಾಗೆ ತೆಗೆದುಕೊಂಡು ಈ ಸಭೆಯ ಮುಂದೆ ಇಟ್ಟರೆ ಆಗ ನಾವು ಈ ಸ್ಥಾನವನ್ನು ಬಿಟ್ಟು ಅವರ ಮನೆಯಲ್ಲಿ ಬೇಕಾದ ಸೇವೆಯನ್ನು ಮಾಡುತ್ತೇವೆ. ಯಾವುದಕ್ಕೂ ತಯಾರು ಇಲ್ಲ, ಆದ್ದರಿಂದ ಇಲ್ಲಿ ಈ ಬಿಲ್ಲನ್ನು ಪ್ರಜಾಭಿಪ್ರಾಯಕ್ಕೆ ಕಳಿಸಿ. ಅದಾಗುವುದಿಲ್ಲವೆಂದರೆ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳಲಿ ತೆಗೆದು ಕೊಳ್ಳುವುದಕ್ಕಾಗುವುದಿಲ್ಲವೆಂದರೆ ಮರ್ಯಾದೆಯಿಂದ ರಾಜೀನಾಮೆ ಕೊಟ್ಟುಬಿಡಲಿ. ರಾಜೀನಾಮೆ ಕೊಡುವುದಿಲ್ಲವೆಂದರೆ ಜನರಿಂದ ರಾಜೀನಾಮೆ ಕೊಡಿಸುವಂತೆ ಮಾಡುತ್ತೇವೆಂದು ಸ್ವಲ್ಪ ಎಚ್ಚರಿಕೆ ಕೊಡುತ್ತೇನೆ.

Mr. SPEAKER.—Reply by the Minister.

(Sri K. Lakkappa got up to speak)

Mr. SPEAKER.—Order, order.

(Interruption by Sri K. Lakkappa)

Mr. SPEAKER.—Does not the member understand the meaning of the words 'Order, Order'?

ಶ್ರೀ ಕೆ. ಲಕ್ಕಪ್ಪ.—ತಮ್ಮನ್ನು ಅರ್ಥಮಾಡಿಕೊಳ್ಳದೇ ಇದ್ದರೆ ಮತ್ತೆ ಯಾರನ್ನು ಅರ್ಥ ಮಾಡಿಕೊಳ್ಳುವುದು.

Mr. SPEAKER.—The hon'ble member must know that he has to approach me through his Leader and his whip. Let the Leader say that this member does not belong to his Party. He gave me some names and I have given chance to them. I have got only one more name.

ಶ್ರೀ ಕೆ. ಲಕ್ಕಪ್ಪ.—ಪ್ರಜಾಪ್ರಭುತ್ವದಲ್ಲಿ ಈ ರೀತಿಯಿಂದ ವರ್ತನೆ ಮಾಡತಕ್ಕದ್ದು ಸರಿಯಲ್ಲ. ಈ ರೀತಿ ಮಾತನಾಡತಕ್ಕದ್ದು ಮತ್ತು ನದನ್ಯರಮೇಲೆ ಕೋಪ ವ್ಯಕ್ತಮಾಡಿದರೆ ನಾನು ಹೆದರುವುದಕ್ಕೆ ಬಂದಿಲ್ಲ. ನಾನು ಅಧಿಕಾರಕ್ಕೇನೂ ಅಂಟಿಕೊಂಡು ಕೂತಿಲ್ಲ.

Mr. SPEAKER.—The Hon'ble member will apologise to the House.

ಶ್ರೀ ಕೆ. ಲಕ್ಕಪ್ಪ.—ನಾನು ಯಾವ ಕಾರಣಕ್ಕಾಗಿ ಅಪಾಲಜಿ ಕೇಳಬೇಕು ? ಏನು ತಪ್ಪು ಮಾಡಿದ್ದೇನೆ ? ಸಭೆಯ ಗೌರವ ತಿಳಿದಿರಬೇಕು. ಈ ಸಭೆಯಲ್ಲಿ ನ್ಯಾಯ, ಧರ್ಮ, ನೀತಿ, ಸತ್ಯ ಇಲ್ಲವಿದ್ದರೆ ಯಾವ ರೀತಿ ಶಾಜನ್ಯ ರೀತಿಯಲ್ಲಿ ಭಾಗವಹಿಸಬೇಕು, ಜನಗಳ ಪ್ರತಿನಿಧಿಗಳು ಏತಕ್ಕೋಸ್ಕರ ಸಭೆಯಲ್ಲಿ ಬರಬೇಕೆಂದು ಅರ್ಥವಾಗುತ್ತಿಲ್ಲ. 3 ದಿವಸಗಳಿಂದ ನಡೆಯುತಕ್ಕದ್ದನ್ನು ನೋಡತ್ತಿದ್ದೇನೆ. ಏನು ಹೇಳಿದರೂ ಕೂಡ ಜವಾಬ್ದಾರಿಯುತವಾದ ಉತ್ತರ ಕೊಡುತ್ತಿಲ್ಲ. ನಮಗೆ ಅಡ್ಡಿ ಬಂದಿರತಕ್ಕ ನೀತಿಯಮೇಲೆ ಮಾತನಾಡುವುದಕ್ಕೆ ಅವಕಾಶವೇ ಸಿಕ್ಕುತ್ತಿಲ್ಲ. ಯಾರಿಗೆ ಸ್ವಾಮಿ ಕೇಳಬೇಕು ? ಜನತಾ ಪ್ರತಿನಿಧಿಗಳು ಯಾವ ರೀತಿ ಕೆಲಸ ಮಾಡಬೇಕು, ನನಗೆ ಅರ್ಥವಾಗುತ್ತಿಲ್ಲ.

Mr. SPEAKER.—Order, order.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ತಮಗೆ ಹೇಳುತ್ತಾ ಇದ್ದೇನೆ.

Mr. SPEAKER.—I called upon the Member to apologise. Far from apologising, he has been making matters worse. I call upon him to retire from the House. I give him 3 minutes time.

